# ಯುಗರಶ್ಮಿ

- ಹಿಂದು - ಮುಸ್ಲಿಂ ಮೈತ್ರಿ
- ಮತಧರ್ಮಗಳ ಉಪಯುಕ್ತತೆ
- "ತವನಿಧಿ"ಗೆ ಒಂದು ಪ್ರತಿಕ್ರಿಯೆ
- ಭಾರತಕ್ಕೆ ಕ್ರಿಸ್ತ ಬಂದಿದ್ದನೆ ?
- ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?


ತ್ರೈಮಾಸಿಕ

ಜೂನ್ 1977

ಇಹ್‌ಸಾನ್ 1356

ಬೆಲೆ: ರೂ. 1-00


ಹೇಳಿರಿ: ನಾವು ಅಲ್ಲಾಹನನ್ನೂ ನಮಗೆ ಅವತೀರ್ಣವಾದುದನ್ನೂ ಪ್ರವಾದಿಗಳಾದ ಇಬ್ರಾಹಿಂ, ಇಸ್ಮಾಯೀಲ್, ಇಸ್‌ಹಾಕ್, ಯಾಕೂಬ್ ಮತ್ತು ಅವರ ಮಕ್ಕಳಿಗೆ, ಹಾಗೆಯೇ ಪ್ರವಾದಿಗಳಾದ ಮೂಸ, ಈಸಾ ಹಾಗೂ ಇತರ ಎಲ್ಲಾ ಪ್ರವಾದಿಗಳಿಗೆ ಅವತೀರ್ಣವಾದುದನ್ನೂ ನಂಬುತ್ತೇವೆ. ಅವರ ಮಧ್ಯೆ ನಾವು ಯಾವ ವ್ಯತ್ಯಾಸವನ್ನೂ ಭಾವಿಸುವುದಿಲ್ಲ. ಅಲ್ಲಾಹನಿಗೆ ನಾವು ವಿಧೇಯರಾಗಿದ್ದೇವೆ.

—ಪವಿತ್ರ ಖುರ್‌ಆನ್ (2:137)

# ಯುಗರಶ್ಮಿ


ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು-575001.

ಸಂಪುಟ: 3 ಸಂಚಿಕೆ: 1

ಎಪ್ರಿಲ್ — ಜೂನ್ 1977 / ಶಹಾದತ್-ಇಹ್‌ಸಾನ್ 1356

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


## ವಿಷಯ ಸೂಚಿಕೆ:


* ಯುಗರಶ್ಮಿಯ ಮೂರನೆಯ ವರ್ಷ
* ಹಿಂದು-ಮುಸ್ಲಿಂ ಮೈತ್ರಿ
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು
* ದೇವರ ಕೋಪದಿಂದ ಮನುಷ್ಯ ವಂಶವನ್ನು ರಕ್ಷಿಸಿರಿ
* ಮತಧರ್ಮಗಳ ಉಪಯುಕ್ತತೆ
* ಸಮುದಾಯ ಮೈತ್ರಿ
* "ತವನಿಧಿ"ಗೆ ಒಂದು ಪ್ರತಿಕ್ರಿಯೆ—ಅಹ್ಮದಿಯಾ ಜಮಾಅತ್
* ಭಾರತಕ್ಕೆ ಕ್ರಿಸ್ತ ಬಂದಿದ್ದನೆ?
* ಮಥುರೆಯಲ್ಲಿ ಲೋಕಮತ ಮಹಾ ಸಮ್ಮೇಳನ
* ಅಹ್ಮದಿಯಾ ವಾರ್ತೆಗಳು
* ಸಂಪಾದಕರಿಗೆ ಪತ್ರ
* ಪುಸ್ತಕ ವಿಭಾಗ-ಯೇಸುಕ್ರಿಸ್ತರು ಮೃತರಾದುದು ಎಲ್ಲಿ?
* ಪಶ್ಚಿಮ ದಿಕ್ಕಿನಿಂದ ಸೂರ್ಯೋದಯ-1.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 3 | ಏಪ್ರಿಲ್ – ಜೂನ್ 1977 / ಶಹಾದತ್–ಇಹ್‌ಸಾನ್ 1356 | ಸಂಚಿಕೆ: 1

## ಯುಗರಶ್ಮಿಯ ಮೂರನೆಯ ವರ್ಷ

ಇದೀಗ 'ಯುಗರಶ್ಮಿ'ಯು ತನ್ನ ಮೂರನೆಯ ವರ್ಷಕ್ಕೆ ಪದಾರ್ಪಣ ಮಾಡಿರುತ್ತದೆ. ಅದಕ್ಕಾಗಿ ನಾವು ಇನ್ನೊಮ್ಮೆ ಸರ್ವಶಕ್ತನಾದ ಪರಮಾತ್ಮನನ್ನು ಸ್ತುತಿಸುತ್ತೇವೆ.

ಯುಗರಶ್ಮಿಯು ತನ್ನ ಹಿಂದಿನ ಎರಡು ವರ್ಷಗಳಲ್ಲಿ ತುಸು ಏನನ್ನೋ ಸಾಧಿಸಿದೆಯೆಂಬ ಹೆಮ್ಮೆಯಿಂದ ಸುಮ್ಮನೆ ಕುಳ್ಳಿರುವ ಹಾಗಿಲ್ಲ. ಅದರ ಲಕ್ಷ್ಯ ವಿದೂರ; ಅದರ ದಾರಿಯುದ್ದಕ್ಕೂ ಕಲ್ಲು ಮುಳ್ಳುಗಳು ತುಂಬಿಕೊಂಡಿವೆ. ಅವನ್ನು ನೀಗಿಸುವ ಕೈಗಳು ಬರೇ ಕೆಲವು; ಅವು ಸಹ ಬಲಹೀನ. ಆದರೆ ಶಕ್ತಿಯುತವೂ ಅದೃಶ್ಯವೂ ಆಗಿರುವ ಒಂದು ಕೈ ನಮ್ಮ ಸಹಾಯಕ್ಕೆ ಇದೆಯೆಂಬ ನಂಬಿಕೆಯೇ ಈ ದುರ್ಗಮ ಪಥದಲ್ಲಿ ಮುಂದೆ ಸಾಗಲು ನಮಗೆ ಸ್ಫೂರ್ತಿ ನೀಡುತ್ತದೆ.

ಯುಗರಶ್ಮಿ ತನ್ನ ಗುರಿಯನ್ನು ತಲಪುವ ಕಾರ್ಯದಲ್ಲಿ ಪರಮಾತ್ಮನು ಯಶಸ್ಸನ್ನು ಕರುಣಿಸಲಿ ಎಂದು ನಾವು ಆ ಸರ್ವವಲ್ಲಭನನ್ನು ಬೇಡಿಕೊಳ್ಳುತ್ತೇವೆ.

—ಸಂಪಾದಕ.

# ಹಿಂದು - ಮುಸ್ಲಿಂ ಮೈತ್ರಿ

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾಗಿದೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದು ಮತ್ತು ಮುಸ್ಲಿಂ ಈ ರಾಷ್ಟ್ರದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು — ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**

ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ—ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ, ಅದು ಅಸಂಭವ ಹಾಗೂ ಭ್ರಮೆ ಮಾತ್ರ ಆಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಛೇದಿಸಲಾಗದಷ್ಟು ಶಕ್ತಿಯುತವಾಗಿದೆ. ಒಂದು ಸಮುದಾಯಕ್ಕೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯಕ್ಕೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟುಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಾಶವನ್ನುಂಟುಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ವೃಕ್ಷಶಾಖೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

o o o o

ಎಲೈ ಮುಸ್ಲಿಮರೇ, ನಿಮಗೂ ಹಿಂದುಗಳಿಗೂ ಮಧ್ಯೆ ಯಥಾರ್ಥ ಹಾಗೂ ಸುಸ್ಥಿರವಾದ ಸೌಹಾರ್ದ ಭಾವವನ್ನು ಸ್ಥಾಪಿಸುವುದು ಹೇಗೆ? ಉಭಯ ಪಕ್ಷದವರು ಸಹ ಪರಸ್ಪರ ಕಾಪಟ್ಯದಿಂದ ಕೂಡಿದ ಒಂದು ತಾತ್ಕಾಲಿಕ ಮೈತ್ರಿಯನ್ನುಂಟುಮಾಡಬಹುದು. ಆದರೆ ಯಥಾರ್ಥ ಮೈತ್ರಿಯೆಂದು ಹೇಳಲಾಗುವ ಭಾವೈಕ್ಯ ಉಂಟಾಗುವುದು, ನೀವು ವೇದವನ್ನೂ ಋಷಿಗಳನ್ನೂ ಆತ್ಮಾರ್ಥತೆಯಿಂದ ಬಹುಮಾನಿಸುವುದರಿಂದಲೂ ಹಾಗೆಯೇ ಹಿಂದುಗಳು ಅವರ ಸಂಕುಚಿತ ಮನೋಭಾವಗಳನ್ನು ಉಪೇಕ್ಷಿಸಿ ನಮ್ಮ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಮುಸ್ತಫಾರವರ ಸತ್ಯತೆಯನ್ನು ಸಮ್ಮತಿಸುವುದರಿಂದಲೂ ಮಾತ್ರವಾಗಿದೆ. ನಿಮ್ಮ ಹಾಗೂ ಹಿಂದುಗಳ ಎಡೆಯಲ್ಲಿ ಯಥಾರ್ಥವಾದ ಐಕ್ಯ ಹಾಗೂ ಸೌಹಾರ್ದ ಉಂಟಾಗಲು ಇದು ಏಕಮಾತ್ರ ಮಾರ್ಗವೆಂದೂ ಹೃದಯ ರೋಗಗಳನ್ನು ಗುಣಪಡಿಸುವ ಒಂದು ರಸಾಯನವೆಂದೂ ತಿಳಿಯಿರಿ.

o o o o

ಪ್ರಿಯ ಬಂಧುಗಳೇ, ಮೈತ್ರಿಗೆ ತುಲ್ಯವಾದುದು ಬೇರೊಂದಿಲ್ಲ. ಬನ್ನಿರಿ. ನಾವು ಎರಡು ಪಕ್ಷದವರೂ ಉಭಯ ಸಮ್ಮತದಿಂದ ಒಂದಾಗುವಾ; ಒಂದು ಜನಾಂಗವಾಗುವಾ. ಪರಸ್ಪರ ಪ್ರವಾದಿಗಳನ್ನೂ ಮಹಾಪುರುಷರನ್ನೂ ಮತಗ್ರಂಥಗಳನ್ನೂ ಆಕ್ಷೇಪಿಸುವ ಕಾರಣದಿಂದ ಎಷ್ಟು ಛಿದ್ರತೆಯೂ ಗೊಂದಲವೂ ಉಂಟಾಗುವು

( 3ನೇ ಪುಟ ನೋಡಿರಿ )

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

* ಆಡಳಿತಾಧಿಕಾರಿಗಳ ಕ್ಷಮಾಶೀಲತೆ ಆಡಳಿತೆಯ ಸ್ಥಿರತೆಗೆ ಆಧಾರವಾಗುವುದು.

* ಮನುಷ್ಯನು ತನ್ನನ್ನು ಪ್ರೀತಿಸುವವನ ಜೊತೆ ಗೂಡುತ್ತಾನೆ.

* ಹೃದಯವು ತನಗೆ ಉಪಕಾರ ಮಾಡಿದವನ ಮೇಲೆ ಸ್ನೇಹವನ್ನೂ ಉಪದ್ರ ಮಾಡಿದವನ ಮೇಲೆ ಕೋಪವನ್ನೂ ಪ್ರಕಟಪಡಿಸಲು ಸ್ವಾಭಾವಿಕವಾಗಿ ಪ್ರೇರಿತವಾಗಿದೆ.

* ಎಲ್ಲಾ ವಸ್ತುಗಳಿಗೂ ಹೊಳಪು ಬರಿಸುವ "ಪಾಲಿಶ್" ಇದೆ; ಹೃದಯದ "ಪಾಲಿಶ್" ದೈವ ಸ್ಮರಣೆಯಾಗಿದೆ.

* ಅತ್ಯಂತ ಉತ್ತಮವಾದ ಪಾಥೇಯ ದೈವ ಭಕ್ತಿಯಾಗಿದೆ.

---

( 2ನೇ ಪುಟದಿಂದ )

ದೆಂದೂ, ರಾಷ್ಟ್ರಕ್ಕೆ ಎಷ್ಟು ನಷ್ಟವಾಗುವುದೆಂದೂ ನೀವು ಕಾಣುತ್ತಿದ್ದೀರಷ್ಟೇ. ಬನ್ನಿರಿ, ಇನ್ನು ಅನ್ಯೋನ್ಯ ಮತ ಸಹಿಷ್ಣುತೆಯ ಅನುಗ್ರಹ ಫಲಗಳನ್ನು ಒಮ್ಮೆ ಪರೀಕ್ಷಿಸಿರಿ. ಇದು ಪರಸ್ಪರ ಸಂಧಾನವನ್ನುಂಟು ಮಾಡಲೂ ಮೈತ್ರಿ ಭಾವವನ್ನು ಹೆಚ್ಚಿಸಲೂ ಉತ್ತಮ ಮಾರ್ಗವಾಗಿದೆ. ಇದಲ್ಲದೆ ಬೇರೆ ಯಾವುದಾದರೂ ರೀತಿಯಲ್ಲಿ ಮೈತ್ರಿ ಸ್ಥಾಪಿಸಲು ಯತ್ನಿಸುವುದಾದರೆ, ಒಳಗಡೆ ದುರ್ಗಂಧವೂ ಕೀವೂ ತುಂಬಿರುವ ಕುರುವನ್ನು ಅದರ ಬಾಹ್ಯ ಶುದ್ಧವನ್ನೂ ಹೊಳಪನ್ನೂ ಕಂಡು ಸಂತೋಷಪಟ್ಟು ಹಾಗೆಯೇ ಬಿಟ್ಟುಬಿಡುವುದಕ್ಕೆ ಸಮಾನವಾಗಿದೆ.

(ಪೈಗಾಮೆ ಸುಲ್ಹ್–1908)

—ಹಝ್ರತ್ ಅಹ್ಮದ್.

—o—o—o—

* ಯಾರು ದೇವರನ್ನು ಕಾಣಲು ಆಶಿಸುತ್ತಾನೋ ಅವನನ್ನು ಕಾಣಲು ದೇವರು ಆಶಿಸುತ್ತಾನೆ.

* ಪರಮಾತ್ಮನು ಒಂಭತ್ತು ಸಂಗತಿಗಳನ್ನು ನನಗೆ ಒಪ್ಪಿಸಿಕೊಟ್ಟಿರುವನು:

(1) ಬಾಹ್ಯವಾಗಿಯೂ ಆಂತರಿಕವಾಗಿಯೂ ಅವನನ್ನು ಸರ್ವೋನ್ನತನೆಂದು ಪರಿಗಣಿಸುವುದು.

(2) ಸಂಪತ್ತಿನ ಕಾಲದಲ್ಲಿಯೂ ವಿಪತ್ತಿನ ಕಾಲದಲ್ಲಿಯೂ ಧೈರ್ಯದಿಂದ ಸತ್ಯವನ್ನು ನುಡಿಯುವುದು.

(3) ವೃದ್ಧಿಯಲ್ಲೂ ಕ್ಷಯದಲ್ಲೂ ಮಿತವಾಗಿರುವುದು.

(4) ಬಂಧುಗಳೂ ನೆರೆಕರೆಯವರೂ ನನಗೆ ಉಪಕಾರ ಮಾಡದಿದ್ದರೂ ನಾನು ಅವರಿಗೆ ಉಪಕಾರ ಮಾಡುವುದು.

(5) ನನ್ನನ್ನು ನಿರಾಕರಿಸುವವನಿಗೂ ನಾನು ಸಹಾಯ ಮಾಡುವುದು.

(6) ನನಗೆ ದ್ರೋಹವನ್ನುಂಟು ಮಾಡಿದವನಿಗೆ ಕ್ಷಮೆ ನೀಡುವುದು.

(7) ನನ್ನ ಮೌನ ದೇವರನ್ನು ಅರಿಯುವುದಕ್ಕಾಗಿರುವುದು.

(8) ನಾನು ಮಾತನಾಡುವಾಗ ದೇವರ ಗಮನವಿರಬೇಕು.

(9) ದೈವಸೃಷ್ಟಿಗಳೊಡನೆ ನನ್ನ ವರ್ತನೆ ಒಂದು ಮಾದರಿಯಾಗಿರಬೇಕು; ನ್ಯಾಯೋಚಿತವಾದ ದಾರಿ ತೋರಿಸಲಿಕ್ಕಾಗಿ ದೇವರು ನನಗೆ ಆಜ್ಞಾಪಿಸಿದ್ದಾನೆ.

# ದೇವರ ಕೋಪದಿಂದ ಮನುಷ್ಯ ವಂಶವನ್ನು ರಕ್ಷಿಸಿರಿ

—ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್,
ಅಹ್ಮದಿಯಾ ಸಂಘಟನೆಯ ಮೂರನೆಯ ಖಲೀಫ.

ಅಹ್ಮದಿಯಾ ಸಂಘಟನೆಯ ಸ್ಥಾಪಕರು ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ವಚನಗಳ ಆಧಾರದಿಂದ, "ಪ್ರತಿಯೊಬ್ಬ ಮನುಷ್ಯನಲ್ಲಿ ಒಳಿತಿಗೆ ಮತ್ತು ಕೆಡುಕಿಗೆ ಪ್ರೇರಕವಾದ ಶಕ್ತಿಗಳು ಸೇರಿಕೊಂಡಿವೆ" ಎಂದು ಹೇಳಿರುವರು. ಕೆಡುಕನ್ನು ಪ್ರೇರೇಪಿಸುವ ಶಕ್ತಿಗಳು ಮನುಷ್ಯನನ್ನು ದೇವರಿಂದ ದೂರವಿರುವಂತೆ ಪ್ರೋತ್ಸಾಹಿಸುವುವು. ಒಳಿತನ್ನು ಪ್ರೇರೇಪಿಸುವ ಶಕ್ತಿಗಳು ಮಾನವರನ್ನು ದೇವರ ಸಮೀಪಕ್ಕೆ ಕೊಂಡೊಯ್ಯುವುವು. ಕೆಡುಕಿನ ಶಕ್ತಿಗಳು ಮನುಷ್ಯರನ್ನು ನರಕಾಗ್ನಿಯತ್ತ ಒಯ್ಯುವುವು. ಒಳಿತಿನ ಶಕ್ತಿಗಳು ಮನುಷ್ಯರನ್ನು ದೇವರ ತೃಪ್ತಿಯೆಂಬ ಸ್ವರ್ಗದತ್ತ ಕೊಂಡೊಯ್ಯುವುವು.

"ನಿಮ್ಮನ್ನೂ ನಿಮ್ಮ ಸಂಬಂಧಿಕರನ್ನೂ ನರಕಾಗ್ನಿಯಿಂದ ರಕ್ಷಿಸಿರಿ" ಎಂದು ದೇವರು ಪವಿತ್ರ ಖುರ್‌ಆನಿನಲ್ಲಿ (66:7) ಹೇಳಿರುವನು. ಪ್ರತಿಯೊಬ್ಬ ಮನುಷ್ಯ ಪ್ರಥಮವಾಗಿ ತನ್ನನ್ನು ನರಕಾಗ್ನಿಯಿಂದ ರಕ್ಷಿಸಲು ಯತ್ನಿಸಬೇಕೆಂದು ಇಸ್ಲಾಂ ಉಪದೇಶಿಸುತ್ತದೆ. ಎರಡನೆಯದಾಗಿ "ನಿಮ್ಮ ಸಂಬಂಧಿಕರನ್ನೂ ರಕ್ಷಿಸಿರಿ" ಎಂಬ ವಾಕ್ಯದಿಂದ ಒಂದು ಸಾಮೂಹಿಕ ಜೀವನದ ಚಿತ್ರವನ್ನು ಇಸ್ಲಾಂ ನಮ್ಮ ಮುಂದಿರಿಸಿದೆ. ಇಲ್ಲಿ "ಸಂಬಂಧಿಕರು" ಎಂಬ ಶಬ್ದದ ಅರ್ಥದಲ್ಲಿ ಹತ್ತಿರದ ಹಾಗೂ ದೂರದ ಬಂಧುಗಳು ಮಾತ್ರವಲ್ಲ ಸಂಪೂರ್ಣ ಮಾನವ ಜನಾಂಗವೂ ಸೇರುತ್ತದೆ. ಪೈಗಂಬರರು ಈ ರೀತಿ ಹೇಳಿರುವರು: "ನಿಮ್ಮೆಲ್ಲರ ಪಿತ ಒಬ್ಬನೇ; ನೀವೆಲ್ಲರೂ ಆದಮರ ಸಂತತಿಗಳು." ಇದರಿಂದ ಲೋಕದಲ್ಲಿರುವವರೆಲ್ಲರೂ ಪರಸ್ಪರ ಬಂಧುಗಳೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಎಲ್ಲರನ್ನೂ ದೇವರ ಇಚ್ಛೆಗೆ ವ್ಯತಿರಿಕ್ತವಾಗಿ ನಡೆಯದಂತೆ ತಡೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇಂದ್ರಿಯಾಸಕ್ತಿ, ದುರಾಶೆ, ದುರಹಂಕಾರ, ದುರಭಿಮಾನ, ಐಶ್ವರ್ಯ, ಹಣ ಮತ್ತು ಅಧಿಕಾರದ ಲಾಲಸೆ ಇವುಗಳು ಮನುಷ್ಯರನ್ನು ದೇವರಿಂದ ಅಗಲಿಸಿ ನರಕದೆಡೆಗೆ ಕೊಂಡೊಯ್ಯುವ ಶಕ್ತಿಗಳ ಪೈಕಿ ಕೆಲವು. ಪವಿತ್ರ ಖುರ್‌ಆನಿನ ಧರ್ಮ ಶಾಸ್ತ್ರವು ಈ ಎಲ್ಲಾ ಶಕ್ತಿಗಳ ಕುರಿತು ವಿವರಿಸಿದೆ. ಈ ಶಕ್ತಿಗಳು ಮನುಷ್ಯರನ್ನು ಅವರ ಜೀವನ ಕಾಲದಲ್ಲಿ ದಾರಿ ತಪ್ಪಿಸಲು ಯತ್ನಿಸುತ್ತವೆ. ಇವುಗಳ ಕುರಿತು ಸದಾ ಎಚ್ಚರದಿಂದಿರಬೇಕು.

ಸಾಮೂಹಿಕ ಜೀವನವು ವ್ಯಕ್ತಿಗಳ ಜೀವನದ ಒಕ್ಕೂಟವಾಗಿದೆ. ಸಾಮೂಹಿಕ ಜೀವನವನ್ನು ಪರಿಶುದ್ಧವಾಗಿಡಲು ಇಸ್ಲಾಂ ವಿಧಿಸುತ್ತದೆ. ಸಮಾಜವು ದೇವರಿಂದ ಅಗಲಿ ಮಲಿನವಾಗಿದ್ದರೆ ಆ ಸಮಾಜದಲ್ಲಿ ಜೀವಿಸುವ ವ್ಯಕ್ತಿಗೆ ತನ್ನ ಸ್ವಯಂ ಪರಿಶುದ್ಧಿಗೆ ಹೆಚ್ಚಿನ ಕಷ್ಟವಾಗುವುದು. ಆದುದರಿಂದ ಮನುಷ್ಯನು ಸ್ವಯಂ ನಿರ್ಮಲನಾಗಿ ಇತರರನ್ನೂ ಪರಿಶುದ್ಧಿಗೊಳಿಸಲು ಯತ್ನಿಸಿ ಅವರು ದೇವರ ಕೃಪೆಗೆ ಪಾತ್ರರಾಗುವಂತೆ ಮಾಡಬೇಕೆಂದು ಆಜ್ಞಾಪಿಸಲಾಗಿದೆ.

ಸಮಾಜವನ್ನು ದುಷ್ಟಶಕ್ತಿಗಳಿಂದಲೂ ನರಕಾಗ್ನಿಯಿಂದಲೂ ರಕ್ಷಿಸಲು ಹೆಚ್ಚಿನ ಶ್ರದ್ಧೆ, ಹೆಚ್ಚಿನ ಪ್ರಯತ್ನ ಮತ್ತು ಹೆಚ್ಚಿನ ಪ್ರಜ್ಞೆಯ ಅವಶ್ಯಕತೆಯಿದೆ. ನಾವು ನಮ್ಮ ಒಳಿತಿಗಾಗಿ ಪ್ರಾರ್ಥನೆ ಮಾಡುವ ರೀತಿಯಲ್ಲಿಯೇ ಸಮಾಜದ ಒಳಿತಿಗಾಗಿಯೂ ಪ್ರಾರ್ಥನೆ ಮಾಡುವುದು ಅತ್ಯಾವಶ್ಯಕವಾಗಿದೆ.

(11-2-1977ರಂದು ರಬ್ವಾದಲ್ಲಿ ಮಾಡಿದ ಶುಕ್ರವಾರದ ಉಪದೇಶ ಭಾಷಣದ ಸಂಕ್ಷಿಪ್ತ ಭಾಗ.)

# ಮತಧರ್ಮಗಳ ಉಪಯುಕ್ತತೆ

ಮೌಲಾನ ಷರೀಫ್ ಅಹ್ಮದ್ ಅಮೀನಿ H. A.

ಮತಧರ್ಮಗಳ ಉಪಯುಕ್ತತೆಯನ್ನು ಸಂಕ್ಷಿಪ್ತವಾಗಿ ಈ ರೀತಿ ವಿವರಿಸಬಹುದು:-

1. ಮತವು ಮನುಷ್ಯನ ಹೃದಯದಲ್ಲಿ ದೇವರ ಅಸ್ತಿತ್ವದ ಪೂರ್ಣ ವಿಶ್ವಾಸ ಉಂಟಾಗುವಂತೆ ಮಾಡಿ ಆತನನ್ನು ದೇವರ ಭೀತಿಯುಳ್ಳ ಸುಸ್ವಭಾವಿಯಾದ ಮಾನವನನ್ನಾಗಿ ಮಾಡುತ್ತದೆ. ಸತ್ಕರ್ಮಗಳ ಮತ್ತು ದುಷ್ಕರ್ಮಗಳ ವ್ಯತ್ಯಾಸ ತಿಳಿಯುವುದು ಮತ್ತು ಮನುಷ್ಯನ ಹುಟ್ಟಿನ ಉದ್ದೇಶವನ್ನರಿಯುವುದು ಮತಗಳ ಮೂಲಕವೇ ಸಾಧ್ಯ.

2. ಮತವು ಮನುಷ್ಯನಿಗೆ ದೇವರೊಡನೆ ಸಂಪರ್ಕ ಸಾಧಿಸುವ ಉಪದೇಶವನ್ನೀಯುವುದರೊಂದಿಗೆ ದೇವರ ಸೃಷ್ಟಿಗಳಿಗೆ ದಯೆದೋರಬೇಕೆಂಬ ಪಾಠವನ್ನೂ ಕಲಿಸುತ್ತದೆ. ಸೃಷ್ಟಿಗೆ ದಯೆದೋರುವ ಉಪದೇಶವನ್ನು ಈ ರೀತಿ ವಿಂಗಡಿಸಬಹುದು:-

i) ಮನುಷ್ಯನ ಆತ್ಮ ಮತ್ತು ಆತನ ಸ್ವಂತ ದೇಹದ ಸಂಬಂಧ:- ದೇಹ ಮಾಡುವ ಕೆಲಸಗಳ ಪರಿಣಾಮ ಆತ್ಮದ ಮೇಲೆ ಉಂಟಾಗುತ್ತದೆ. ದೇಹದ ಕೆಲಸಗಳಿಂದ ಆತ್ಮವು ಪ್ರಭಾವಿತವಾಗುತ್ತದೆ. ದೇಹ ಮತ್ತು ಆತ್ಮದ ಸಂಬಂಧ ಸಿಪ್ಪೆ ಮತ್ತು ತಿರುಳಿನಂತಿದೆ.

ii) ಮನುಷ್ಯ ಮತ್ತು ಇತರ ಮನುಷ್ಯರ ಸಂಬಂಧ:-

ಒಬ್ಬ ಮನುಷ್ಯ ಬೇರೆ ಮನುಷ್ಯರೊಂದಿಗೆ ಯಾವ ರೀತಿ ನ್ಯಾಯ, ಅನುಕಂಪ, ಪ್ರೀತಿ, ಮತ್ತು ದಯೆಯಿಂದ ವರ್ತಿಸಬೇಕೆಂದು ಧರ್ಮವು ಬೋಧಿಸುತ್ತದೆ. ಸಮಾಜದ ನಿಮ್ನ ವರ್ಗದ ಮತ್ತು ಬಡವರಾದ ಜನರೊಂದಿಗೆ ಯಾವ ರೀತಿ ಕರುಣೆಯಿಂದಲೂ ಸೌಮ್ಯತೆಯಿಂದಲೂ ವರ್ತಿಸಬೇಕೆಂದು ಧರ್ಮವು ಕಲಿಸುತ್ತದೆ.

iii) ಮನುಷ್ಯರು ಮೃಗಪಕ್ಷಿಗಳೊಂದಿಗೆ ಸಹ ಪ್ರೀತಿ ವಾತ್ಸಲ್ಯಗಳಿಂದ ವರ್ತಿಸಬೇಕೆಂದೂ ಅವುಗಳ ಅವಶ್ಯಕತೆಗಳ ಕಡೆಗೆ ಗಮನ ಹರಿಯಿಸಬೇಕೆಂದೂ ಧರ್ಮವು ಕಲಿಸುತ್ತದೆ.

ಮನುಷ್ಯ ಮತ್ತು ಸೃಷ್ಟಿಯ ಸಂಬಂಧದ ವಿವರಣೆಯ ನಂತರ ನಮ್ಮ ಮೂಲ ವಿಷಯವಾದ ಧರ್ಮದ ಪ್ರಧಾನ ಉಪಯುಕ್ತತೆಗಳ ಪೈಕಿ ಮೊದಲೇ ವಿವರಿಸಿದ ಎರಡು ಉಪಯುಕ್ತತೆಗಳ ಸರಣಿಯನ್ನು ಈ ರೀತಿ ಮುಂದುವರಿಸುತ್ತೇನೆ:-

3. ಮತವು ಮನುಷ್ಯನಿಗೆ ಬಹಳ ಭರವಸೆ ಮತ್ತು ಶಕ್ತಿಯನ್ನು ಕೊಡುತ್ತದೆ. ಕಷ್ಟಕಾಲಗಳಲ್ಲಿ ಮನುಷ್ಯರು ನಿರಾಶೆಗೊಳ್ಳದಂತೆ ಅದು ಕಾಪಾಡುತ್ತದೆ. ಪ್ರಾಪಂಚಿಕ ಕಷ್ಟ, ಮತ್ತು ಪರೀಕ್ಷೆಗಳು ಮನುಷ್ಯರನ್ನು ಆತ್ಮಿಕವಾದ ಅನುಗ್ರಹಗಳಿಗೆ ಪಾತ್ರರಾಗುವಂತೆ ಮಾಡುತ್ತದೆ. ಪವಿತ್ರ ಖುರ್-ಆನಿನಲ್ಲಿ ದೇವರು ಈ ರೀತಿ ಮನುಷ್ಯರಿಗೆ ಆಶ್ವಾಸನವಿತ್ತಿರುವನು: "ದೇವರ ಅನುಗ್ರಹಗಳ ಕುರಿತು ಎಂದಿಗೂ ನಿರಾಶರಾಗಬೇಡಿರಿ.'' ಮನಸ್ಸಿಗೆ ಶಾಂತಿ, ಸಮಾಧಾನಗಳು ಮತ ಮತ್ತು ದೇವರ ಧ್ಯಾನದಿಂದಲೇ ಲಭಿಸಲು ಸಾಧ್ಯ.

4. ಧರ್ಮಿಷ್ಠನಾದ ಮನುಷ್ಯನು ಮರಣಾನಂತರದ ಜೀವನವನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಾಪಂಚಿಕವಾದ ಎಲ್ಲಾ ಸಂಕಷ್ಟಗಳ ಹೊರೆಗಳನ್ನು ಹೊರುತ್ತಾನೆ. ಕ್ಷಣಿಕವಾದ ಈ ಪ್ರಾಪಂಚಿಕ ಜೀವನದಲ್ಲಿ ಆತನಿಗೆ ಹೆಚ್ಚಿನ ಆಸಕ್ತಿಯಿಲ್ಲ. ಮನುಷ್ಯನ ಉದ್ದಿಶ್ಯಶುದ್ಧಿಯ ಪ್ರತಿಫಲವನ್ನು ಮತವೇ ಆತನಿಗೆ ಕೊಡಿಸಬಲ್ಲುದು. ತನ್ನ ಉದ್ದೇಶವನ್ನು ಗಳಿಸಲು ಅಸಮರ್ಥನಾದವನೂ ಸಹ ತನ್ನ ಉದ್ದಿಶ್ಯಶುದ್ಧಿಯ ಕಾರಣದಿಂದ ಪುಣ್ಯ ಗಳಿಸುವನು.

5. ಧರ್ಮಭ್ರಷ್ಟನು ಕಾನೂನು ಮತ್ತು ಪೋಲೀಸಿಗೆ ಮಾತ್ರ ಹೆದರುತ್ತಾನೆ. ಆದರೆ ಧರ್ಮಿಷ್ಟನು

ಸದಾ ಕಾಲ ದೇವರಿಗೆ ಹೆದರುತ್ತಾ ಇರುತ್ತಾನೆ. ಆತನ ಹೃದಯು ಯಾವಾಗಲೂ ದೇವರ ಭಯದಿಂದ ಭರಿತವಾಗಿರುತ್ತದೆ. ಮತವು ಮನುಷ್ಯನ ಮನಸ್ಸಾಕ್ಷಿಯನ್ನೂ ಶಾರೀರಿಕ ಮತ್ತು ಆತ್ಮಿಕ ಶಕ್ತಿಯನ್ನೂ ಪೋಷಿಸುತ್ತದೆ.

6. ಧರ್ಮಿಷ್ಟನಾದ ಮನುಷ್ಯನು ತನ್ನ ಮರಣಾನಂತರದ ಜೀವನವನ್ನು ಗಮನದಲ್ಲಿಟ್ಟುಕೊಂಡು ತನ್ನ ಕೃತ್ಯಗಳನ್ನು ನಿಯಂತ್ರಿಸುವನು. ಆದರೆ ಧರ್ಮರಹಿತನು ಪ್ರಾಪಂಚಿಕವಾದ ಲಾಭ ಮತ್ತು ದುರಾಶೆಯಿಂದ ಕೂಡಿದವನಾಗಿ ನ್ಯಾಯಯುತವಾಗಿ ನಡೆಯಲಾರನು.

7. ಮತವು ಒಂದು ಮಹತ್ತಾದ "ಜಾಗತಿಕ ಭ್ರಾತೃತ್ವ" (Universal Brotherhood) ವನ್ನು ಸ್ಥಾಪಿಸುತ್ತದೆ. ಎಲ್ಲಾ ಸೃಷ್ಟಿಗಳಿಗೆ ಒಬ್ಬನೇ ಒಬ್ಬ ಸೃಷ್ಟಿಕರ್ತನಿರುವುದರಿಂದ ಎಲ್ಲಾ ಜನರು ಸೋದರರಾಗುವರು. "ದೇವರ ಸೃಷ್ಟಿಯೇ ದೇವರ ಕುಟುಂಬ" ಎಂಬ ಪೈಗಂಬರ್ ವಚನ ಇದನ್ನು ಸೂಚಿಸುತ್ತದೆ. ಒಮ್ಮೆ ನಾಸ್ತಿಕರ ಒಬ್ಬ ದೊಡ್ಡ ಮುಖಂಡರಾದ ಗೋರಾ*ರವರು ''ನನ್ನ ಚಳವಳದ ಉದ್ದೇಶವೂ ಮನುಷ್ಯರಲ್ಲಿ ಭ್ರಾತೃಭಾವ ಉಂಟು ಮಾಡುವುದಾಗಿದೆ'' ಎಂದು ನನ್ನೊಡನೆ ಹೇಳಿದರು. ಆಗ ನಾನು ಈ ರೀತಿ ಹೇಳಿದೆನು: "Mr. Gora! When you deny the Fatherhood of God then how Can be there brotherhood of men" (ಮಿಸ್ಟರ್ ಗೋರಾ! ನೀವು ದೇವರ ಪಿತೃತ್ವವನ್ನು ನಿಷೇಧಿಸಿರುವಾಗ ಜನರಲ್ಲಿ ಭ್ರಾತೃತ್ವವನ್ನು ಹೇಗೆ ನೆಲೆಗೊಳಿಸುವಿರಿ?''). ನನ್ನ ಪ್ರಶ್ನೆಯನ್ನು ಉತ್ತರಿಸಲಾರದ ಆ ನಾಸ್ತಿಕ ಮಹಾಶಯರವರು ಮೌನಾವಲಂಬಿಯಾದರು.

8. ಮಾನವ ನಿರ್ಮಿತ ಕಾನೂನುಗಳಲ್ಲಿ ಯಾವುದು ಸಹ ಆ ಕಾನೂನು ರಚಿಸಿದವರ ವಲಯವನ್ನು ದಾಟಿ ಸ್ವೀಕೃತವಾಗುವುದಿಲ್ಲ. ಇಂಗ್ಲೆಂಡಿನವರು ಜರ್ಮನಿಯ ಕಾನೂನುಗಳನ್ನು ಸ್ವೀಕರಿಸುವುದಿಲ್ಲ. ಜರ್ಮನಿಯವರು ಇಂಗ್ಲೆಂಡಿನ ಅಥವಾ ಇನ್ನಾವುದೋ ದೇಶದ ಕಾನೂನುಗಳನ್ನು ಅನುಸರಿಸುವುದಿಲ್ಲ. ಆದರೆ ಒಂದು ಕಾನೂನು ದೇವರ ಕಾನೂನೆಂದು ಒಬ್ಬ ಮನುಷ್ಯನಿಗೆ ಬೋಧ್ಯವಾಗುವಂತೆ ಮಾಡಿದರೆ ಆ ವ್ಯಕ್ತಿ ಭೂಲೋಕದ ಯಾವ ಮೂಲೆಯಲ್ಲಿ ವಾಸಿಸುತ್ತಿದ್ದರೂ ಆ ಕಾನೂನಿನ ಪ್ರಕಾರ ನಡೆಯಲು ಸನ್ನದ್ಧನಾಗುವನು.

9. ಮತವು ಯಾವಾಗಲೂ ನಿರ್ಮಾಣ ಕಾರ್ಯಗಳನ್ನೇ ಮಾಡಿದೆ. ಆದರೆ ಧರ್ಮರಾಹಿತ್ಯವು ಯಾವಾಗಲೂ ವಿನಾಶಕಾರೀ ಕಾರ್ಯಗಳನ್ನೇ ಮಾಡಿದೆ. ಜಾಗತಿಕ ಮತ ಧರ್ಮಗಳ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಮತಗಳ ಮೂಲಕ ಉಂಟಾದ ಕ್ರಾಂತಿಯು ರಚನಾತ್ಮಕವಾಗಿದ್ದಿತೆಂದೂ ಮತನಿಷ್ಠರ ವಿರುದ್ಧ ಬಲಾತ್ಕಾರ ಮತ್ತು ದೌರ್ಜನ್ಯಗಳನ್ನು ಮತ ವಿರೋಧಿಗಳೇ ಪ್ರಯೋಗಿಸಿದರೆಂದೂ ತಿಳಿಯಬಹುದು.

10. ಮತವು ತನ್ನಲ್ಲಿ ವಿಶಿಷ್ಟವಾದ ಆಕರ್ಷಣೆಯನ್ನೂ ಆತ್ಮಿಕವಾದ ಶಕ್ತಿಯನ್ನೂ ಹೊಂದಿಕೊಂಡಿದೆ. ಅದು ಜನರ ಐಕ್ಯತೆಗೂ ಅದರ ಅಭಿವೃದ್ಧಿಗೂ ಕಾರಣವಾಗಿದೆ. ಇದರಿಂದಾಗಿಯೇ ಲೋಕದಲ್ಲಿ ಅನೇಕ ಧಾರ್ಮಿಕ ವಿಪ್ಲವಗಳು ಉಂಟಾಗಿವೆ.

ಧರ್ಮದಿಂದ ಅಸಂಖ್ಯಾತ ಲೌಕಿಕ ಮತ್ತು ಪಾರಮಾರ್ಥಿಕ ಪ್ರಯೋಜನಗಳನ್ನು ಪಡೆಯಬಹುದು. ಆದರೆ ಧರ್ಮದ ನಿಜವಾದ ಮಹತ್ವ ಮತ್ತು ಅದರ ಆತ್ಮಿಕ ಪ್ರಭಾವ ಒಬ್ಬ ಧರ್ಮನಿಷ್ಠ ವ್ಯಕ್ತಿಗೆಯೇ ತಿಳಿಯಲು ಸಾಧ್ಯ. (3-3-1977ರ ಸಾಪ್ತಾಹಿಕ ಉರ್ದು ಪತ್ರ ''ಬದರ್''ನಿಂದ ಸಂಗ್ರಹಿತ).

—೦—೦—೦—

*ಗೋಪರಾಜು ರಾಳ್ಳಪಲ್ಲಿ ಎಂಬುದು ಇವರ ಪೂರ್ಣವಾದ ಹೆಸರು. ಆದರೆ ಗೋ. ರಾ. ಎಂದೇ ಪ್ರಸಿದ್ಧರಾದ ಆಂಧ್ರ ಪ್ರದೇಶದ ಈ ನಾಸ್ತಿಕ ನಾಯಕರು ಈಗ ದಿವಂಗತರಾಗಿರುವರು.

—ಅನುವಾದಕ.

# ಸಮುದಾಯ ಮೈತ್ರಿ*

—ಎಂ. ಪಿ. ಇಬ್ರಾಹಿಂ, ಮಂಜೇಶ್ವರ.

ಇಂದು ಲೋಕದಲ್ಲಿ ಅನೇಕ ಧರ್ಮಗಳನ್ನು ನಾವು ಕಾಣುತ್ತೇವೆ. ವಿಶೇಷವಾಗಿ ನಮ್ಮ ಭಾರತ ಭೂಮಿಯು ಮತಗಳ ಒಂದು ಪ್ರದರ್ಶನಾಲಯವಾಗಿದೆ. ಭಾರತದಲ್ಲಿ ಇಲ್ಲದ ಧರ್ಮಗಳೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹೀಗಿರುವಾಗ ವಿವಿಧ ಧರ್ಮಗಳಲ್ಲಿ ವಿಶ್ವಾಸ ಹೊಂದಿದ ವಿವಿಧ ಮತಸ್ಥರು ಜೀವಿಸುತ್ತಿರುವ ಈ ಲೋಕದಲ್ಲಿ ಅವರು ಪರಸ್ಪರ ಮೈತ್ರಿಯಿಂದಲೂ ಸೌಹಾರ್ದದಿಂದಲೂ ಜೀವಿಸಬೇಕಾದುದು ಅತ್ಯಂತ ಅಗತ್ಯವಾಗಿರುತ್ತದೆ. ಶಾಂತಿಯಿಂದಲೂ ಸಮಾಧಾನದಿಂದಲೂ ಬಾಳುವೆಯನ್ನು ನಡೆಸಲು ಎಲ್ಲರೂ ಇಚ್ಛಿಸುತ್ತಾರೆ. ಎಲ್ಲಿ ಶಾಂತಿ ಮತ್ತು ಸಮಾಧಾನವು ಇಲ್ಲವೋ ಅಲ್ಲಿ ಮನುಷ್ಯನಿಗೆ ಸೌಖ್ಯದಿಂದ ಜೀವಿಸಲು ಸಾಧ್ಯವಿಲ್ಲ. ಭಾರತೀಯ ಧರ್ಮ ಸಮ್ಮೇಳನವೆಂಬ ಹೆಸರಿನಲ್ಲಿ ಜರಗುತ್ತಿರುವ ಈ ಮಹಾ ಸಮ್ಮೇಳನದಲ್ಲಿ ಇಸ್ಲಾಂ ಧರ್ಮದ ಪ್ರತಿನಿಧಿಯಾಗಿದ್ದುಕೊಂಡು "ಸಮುದಾಯ ಮೈತ್ರಿ" ಎಂಬ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡಲು ಸಂದರ್ಭ ಲಭಿಸಿದ್ದರಲ್ಲಿ ನನಗೆ ಅತೀವ ಸಂತೋಷವಿದೆ.

ಅತ್ಯಂತ ಆಪತ್ಕರವಾದ ಒಂದು ಕಾಲದಲ್ಲಿ ನಾವು ಜೀವಿಸುತ್ತಿದ್ದೇವೆ. ಅಂದರೆ, ಇಂದಿನ ಜಗತ್ತಿನಲ್ಲಿ ಧರ್ಮಗಳಿಗೆ ಸ್ಥಾನವು ಕಡಿಮೆಯಾಗುತ್ತಾ ಬರುತ್ತಿದೆ. ಮತ ಧರ್ಮಗಳನ್ನು ವಿರೋಧಿಸುವ, ಪರಮಾತ್ಮನ ಅಸ್ತಿತ್ವವನ್ನೇ ನಿರಾಕರಿಸುವ ಬಹಳ ಮಂದಿಗಳನ್ನು ನಾವು ಕಾಣುತ್ತೇವೆ. ಮನುಷ್ಯ ಜೀವನದಲ್ಲಿ ಧರ್ಮಗಳ ಆವಶ್ಯಕತೆಯೇ ಇಲ್ಲವೆಂಬುದು ಅವರ ವಾದ. ಧರ್ಮದ ಹೆಸರಿನಲ್ಲಿ ಮತಸ್ಥಾಪಕರೂ ಮತಾಚಾರ್ಯರೂ ಮನುಷ್ಯ ಕುಲವನ್ನು ವಂಚಿಸಿದ್ದಾರೆಂದು ಅವರು ಹೇಳುತ್ತಾರೆ. ಮತಾನುಯಾಯಿಗಳು ಹೇಳುವಂತೆ ಪರಮಾತ್ಮನೆಂಬ ಒಂದು ಅಗೋಚರ ಶಕ್ತಿಯು ಇಲ್ಲ; ಈ ಪ್ರಪಂಚವು ತನ್ನಷ್ಟಕ್ಕೆ ತಾನೇ ಉಂಟಾಯಿತು; ತನ್ನಷ್ಟಕ್ಕೆ ತಾನೇ ಮುಂದುವರಿದು ಸಾಗುತ್ತಿದೆ ಎಂದು ಅವರು ಹೇಳುತ್ತಾರೆ. ಮನುಷ್ಯನಿಗೆ ಧರ್ಮದ ಆವಶ್ಯಕತೆಯಿಲ್ಲ ಎಂದು ಮಾತ್ರವಲ್ಲ ಧರ್ಮಗಳು ಲೋಕದಲ್ಲಿ ಇರಲೇಬಾರದು ಎಂಬುದನ್ನು ದೃಢೀಕರಿಸಲು ಅವರು ತೋರಿಸುವ ಒಂದು ಕಾರಣ ವಿಭಿನ್ನ ಧರ್ಮೀಯರಲ್ಲಿ ಕಂಡುಬರುವ ಪರಸ್ಪರ ಕಲಹ ಮತ್ತು ದ್ವೇಷವಾಗಿದೆ. ಲೋಕದಲ್ಲಿ ವಾಸಿಸುವವರೆಲ್ಲಾ ಒಂದೇ ಮತಸ್ಥರಲ್ಲ; ಒಂದೇ ಧರ್ಮದಲ್ಲಿ ವಿಶ್ವಾಸವಿಡುವವರಲ್ಲ. ಹಾಗಿರುವಾಗ, ಇವರೊಳಗೆ ಅನ್ಯೋನ್ಯ ಕಲಹವೂ ಹೋರಾಟವೂ ತಪ್ಪಿದ್ದಲ್ಲ ಎಂದು ಧರ್ಮದ ಎದುರಾಳಿಗಳು ಹೇಳುತ್ತಾರೆ. ಮತಪರವಾದ ವ್ಯತ್ಯಾಸವನ್ನು ಆಧಾರವಾಗಿರಿಸಿಕೊಂಡು ಇಂದು ಲೋಕದಲ್ಲಿ ವರ್ಣಿಸಲಸಾಧ್ಯವಾದಂತಹ ಕಲಹಗಳೂ ಕೊಲೆಗಳೂ ಕೊಳ್ಳೆಗಳೂ ನಡೆಯುತ್ತಿವೆ ಎಂಬುದಂತೂ ಸತ್ಯ. ಆದರೆ, ಇದಕ್ಕೆಲ್ಲಾ ಧರ್ಮಗಳೇ ಕಾರಣ; ಆದುದರಿಂದ ಧರ್ಮಗಳೇ ಬೇಡ ಎಂದು ಹೇಳುವುದಂತೂ ಸತ್ಯವಲ್ಲ. ಲೋಕದಲ್ಲಿ ಇಂದು ಅಸ್ತಿತ್ವದಲ್ಲಿರುವ ಯಾವುದೇ ಮತವೂ ಯಾವುದೇ ಧರ್ಮವೂ ಅಕ್ರಮವನ್ನೂ ಅನಾಚಾರವನ್ನೂ ಕಲಹವನ್ನೂ ಉಪದೇಶಿಸುವುದಿಲ್ಲ ಎಂದು ನಾನು ಮೊತ್ತಮೊದಲಾಗಿ ಹೇಳಬಯಸುತ್ತೇನೆ. ಧರ್ಮಗಳ ನಿಜವಾದ ಉಪದೇಶಗಳನ್ನು ಚೆನ್ನಾಗಿ ಗ್ರಹಿಸದ ಯಾರೋ ಅಲ್ಪಜ್ಞಾನಿಗಳು ಧರ್ಮದ ಹೆಸರಿನಲ್ಲಿ ಅತ್ಯಾಚಾರವೆಸಗಿದ್ದರೆ ಅದಕ್ಕೆ ಧರ್ಮಗಳು ಎಂದೂ ಹೊಣೆಯಲ್ಲ. ನನಗೆ ತಿಳಿದಷ್ಟರ ಮಟ್ಟಿಗೆ ಎಲ್ಲಾ ಧರ್ಮಗಳೂ ಶಾಂತಿಯನ್ನೂ ಸಮಾಧಾನವನ್ನೂ ಪರಸ್ಪರ ಸೌಹಾರ್ದವನ್ನೂ ಉಪದೇಶಿಸುತ್ತವೆ. ಇಸ್ಲಾಂ ಧರ್ಮದ ಪ್ರತಿನಿಧಿಯೆಂಬ ನೆಲೆಯಲ್ಲಿ ನಾನು ಹೇಳುತ್ತೇನೆ: "ಇಸ್ಲಾಂ" ಎಂಬ ನಾಮವೇ ಶಾಂತಿಯ ಸಂಕೇತವಾಗಿದೆ. ಪರಸ್ಪರ ಶಾಂತಿಯಿಂದಲೂ ಸೌಹಾರ್ದದಿಂದಲೂ ವರ್ತಿಸಲು ಇಸ್ಲಾಂ ಧರ್ಮವು ಅದರ ಅನುಯಾಯಿಗಳೊಡನೆ ಆಜ್ಞಾಪಿಸುತ್ತದೆ. ಇಸ್ಲಾಂ ಮತದ ಹೊರಗಿರುವವರನ್ನು ಹೀನಭಾವದಿಂದ ಕಾಣಲು ಇಸ್ಲಾಂ ಹೇಳುವುದಿಲ್ಲ. ಎಲ್ಲರೂ ದೇವರ ಸೃಷ್ಟಿಗಳು. ಮನುಷ್ಯರೆಂಬ ನೆಲೆಯಲ್ಲಿ ಎಲ್ಲರೂ ಸಮಾನರು. ಎಲ್ಲರನ್ನೂ ಸೃಷ್ಟಿಸಿದವನು ಪರಮಾತ್ಮನೇ. ಆದುದರಿಂದ ನಾವೆಲ್ಲರೂ ಪರಸ್ಪರ

* ಬಸವಾ ಪಟ್ಟಣದಲ್ಲಿ ಜರಗಿದ ಭಾರತೀಯ ಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣ.

ಸಹೋದರರಾಗಿದ್ದೇವೆ. ಮುಸ್ಲಿಮರಿಗೆ ಬೇರೆ ದೇವರು, ಹಿಂದುಗಳಿಗೆ ಬೇರೆ, ಕ್ರೈಸ್ತರಿಗೆ ಬೇರೆ ಎಂದು ಮುಸ್ಲಿಮರು ನಂಬುವುದಿಲ್ಲ. ನೋಡಿರಿ, ಮುಸ್ಲಿಮರ ಧರ್ಮಗ್ರಂಥವಾದ ಪವಿತ್ರ ಖುರಾನಿನ ಮೊತ್ತಮೊದಲಿನ ವಚನವು "ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್'' ಎಂದಾಗಿದೆ. ಅಂದರೆ "ಸರ್ವ ಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆದ ಪರಮಾತ್ಮನು ಮಾತ್ರ ಎಲ್ಲಾ ಸ್ತುತಿಗಳಿಗೂ ಅರ್ಹನು.'' ರಬ್ಬಿಲ್ ಆಲಮೀನ್ ಎಂದರೆ ಸರ್ವ ಜಗತ್ತಿನ ಪಾಲಕನಾದ ಪರಮಾತ್ಮ ಎಂದರ್ಥ. ಇಲ್ಲಿ ಮುಸ್ಲಿಮರ ದೇವರೆಂದೋ ಅರೇಬಿಯಾದ ದೇವರೆಂದೋ ಹೇಳದೆ ಸರ್ವಲೋಕ ಪಾಲಕನಾದ ಪರಮಾತ್ಮ ಎಂದು ಹೇಳಿರುವುದನ್ನು ಕಾಣಬಹುದು. ಅವನು ಎಲ್ಲರ ಒಡೆಯನು, ಎಲ್ಲಾ ಸೃಷ್ಟಿಗಳೂ ಅವನ ಮಕ್ಕಳು.

ಮಾನವರು ಪರಸ್ಪರ ಸ್ನೇಹದಿಂದಲೂ ಸೌಹಾರ್ದದಿಂದಲೂ ವರ್ತಿಸಿ ಪ್ರಪಂಚದಲ್ಲಿ ಶಾಂತಿಯು ನೆಲೆಗೊಳ್ಳುವಂತಾಗಲು ಇಸ್ಲಾಂ ಮತವು ಹಲವಾರು ಮೂಲಭೂತ ಸಿದ್ಧಾಂತಗಳನ್ನು ನಮ್ಮ ಮುಂದಿಟ್ಟಿದೆ. ಅದರಲ್ಲಿ ಒಂದನೆಯದು ಪರಮಾತ್ಮನ ಏಕತ್ವ ಅಂದರೆ ನಮ್ಮನ್ನೆಲ್ಲಾ ಸೃಷ್ಟಿಸಿ ಪಾಲಿಸಿ ಪೋಷಿಸುವ ಪರಮಾತ್ಮನು ಜಗತ್ತಿನ ಏಕ ತಂದೆಯಂತಿರುವನು. ಆಗ ನಾವೆಲ್ಲರೂ ಸಹೋದರರಾದೆವು. ಹಿಂದುಗಳೋ ಮುಸ್ಲಿಮರೋ ಕ್ರೈಸ್ತರೋ ಸಿಖ್ಖರೋ ಯಾವ ಮತಸ್ಥರೇ ಆದರೂ ಪರಸ್ಪರ ಸಹೋದರರು. ಇಸ್ಲಾಂ ಧರ್ಮವು ಸಮರ್ಪಿಸುವ ಮಹತ್ತಾದ ಈ ಶಾಂತಿಯ ಸಂದೇಶವನ್ನು ಚೆನ್ನಾಗಿ ಗ್ರಹಿಸಿಕೊಳ್ಳಲು ಮನುಷ್ಯರಿಗೆ ಸಾಧ್ಯವಾಯಿತೆಂದಾದರೆ ಲೋಕವು ಶಾಂತಿಯ ನೆಲೆಬೀಡಾಗುವುದರಲ್ಲಿ ಸಂದೇಹವಿಲ್ಲ.

ಸಮುದಾಯ ಮೈತ್ರಿಗಾಗಿ ಇಸ್ಲಾಂ ಮತವು ನೀಡುತ್ತಿರುವ ಇನ್ನೊಂದು ಮಹತ್ತಾದ ಸಂದೇಶವು, ಎಲ್ಲಾ ಧರ್ಮಗಳ ಮತ್ತು ಧರ್ಮಸ್ಥಾಪಕರ ಮೂಲವು ಒಂದೇ ಆಗಿದೆಯೆಂಬ ತತ್ವವಾಗಿದೆ. ಪ್ರಪಂಚದಲ್ಲಿ ಅವತರಿಸಿದ ಎಲ್ಲಾ ಪ್ರವಾದಿಗಳನ್ನೂ ಅವತಾರ ಪುರುಷರನ್ನೂ ಅಂಗೀಕರಿಸುವಂತೆಯೂ ಅವರನ್ನು ಆದರಿಸುವಂತೆಯೂ ಪವಿತ್ರ ಖುರಾನ್ ನಿರ್ದೇಶವಿತ್ತಿದೆ. ಸರ್ವ ಜಗತ್ತಿನ ಪಾಲಕನಾದ ಪರಮಾತ್ಮನು ಲೋಕದ ಎಲ್ಲಾ ಮೂಲೆಮೂಲೆಗಳಲ್ಲಿ ಜೀವಿಸುವವರಿಗೂ ಅಗತ್ಯವಾಗಿರುವ ಎಲ್ಲಾ ಭೌತಿಕ ಸಾಮಾಗ್ರಿಗಳನ್ನೂ ಒದಗಿಸಿಕೊಟ್ಟಿರುವನು. ಸೂರ್ಯ, ಭೂಮಿ, ವಾಯು, ನೀರು ಮೊದಲಾದ ಎಲ್ಲಾ ಅನುಗ್ರಹಗಳನ್ನೂ ಪರಮಾತ್ಮನು ತನ್ನ ಎಲ್ಲಾ ಸೃಷ್ಟಿಗಳಿಗೂ ಇತ್ತಿರುವುದನ್ನು ನಾವು ಕಾಣುತ್ತೇವೆ. ಹೀಗಿರುವಾಗ ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಅವನು ಕೆಲವು ಸಮುದಾಯಗಳಲ್ಲಿ ಮಾತ್ರವೇ ಪ್ರವಾದಿಗಳನ್ನೂ ಅವತಾರ ಪುರುಷರನ್ನೂ ಕಳುಹಿಸಿದನು ಎಂದು ಹೇಳುವುದು ಹೇಗೆ? ಈ ವಿಷಯವಾಗಿ ಇಸ್ಲಾಂ ಧರ್ಮವು ಅತಿ ಮಹತ್ತಾದ ಒಂದು ತತ್ವವನ್ನು ನಮಗೆ ಕಲಿಸಿಕೊಟ್ಟಿದೆ. ಲೋಕದ ವಿವಿಧ ಭಾಗಗಳಲ್ಲಿ ಜನಿಸಿದ ಜನರನ್ನು ಧಾರ್ಮಿಕ ತತ್ವಗಳೆಡೆಗೆ ಆಹ್ವಾನಿಸಿದ ಎಲ್ಲಾ ಪ್ರವಾದಿಗಳೂ ಅವತಾರ ಪುರುಷರೂ ಪರಮಾತ್ಮನ ಸತ್ಯ ದೂತರೆಂದೂ ಪವಿತ್ರ ಖುರಾನ್ ಘೋಷಿಸುತ್ತದೆ. ನೋಡಿರಿ, "ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನದೀರ್'' ಅಂದರೆ "ಪ್ರವಾದಿಗಳು ಕಳುಹಿಸಲ್ಪಡದ ಜನಸಮೂಹವೇ ಇಲ್ಲ'' ಎಂದೂ "ಲಿ ಕುಲ್ಲಿ ಖೌಮಿನ್‌ಹಾದ್'' "ಎಲ್ಲಾ ಸಮುದಾಯಗಳೆಡೆಯಲ್ಲೂ ಮಾರ್ಗದರ್ಶಕರು ಅವತರಿಸಿರುವರು'' ಎಂದೂ ಪವಿತ್ರ ಖುರಾನ್ ಹೇಳುತ್ತದೆ. ನಿಜವಾಗಿಯೂ ಇದು ಇಸ್ಲಾಂ ಧರ್ಮದ ಮಹತ್ವಗಳಲ್ಲೊಂದಾಗಿದೆ. ಇತರ ಮತಸ್ಥರ ಪ್ರವಾದಿಗಳನ್ನೂ ಮಹಾಪುರುಷರನ್ನೂ ಆದರಿಸಿ ಅವರ ಸತ್ಯತೆಯನ್ನು ಅಂಗೀಕರಿಸಬೇಕೆಂಬ ತತ್ವವನ್ನು ಹೇಳುತ್ತಾ ಸಮುದಾಯಗಳೆಡೆಯಲ್ಲಿ ಮೈತ್ರಿಯನ್ನೂ ಸೌಹಾರ್ದವನ್ನೂ ಬೆಳೆಸಲು ಇಸ್ಲಾಂ ಧರ್ಮವು ಕಲಿಸಿದೆ. ಈ ತತ್ವಗಳ ಆಧಾರದ ಮೇಲೆ ಅಹ್ಮದಿಯಾ ಮುಸ್ಲಿಮರಾದ ನಾವು ಯಾವ ರೀತಿ ಮುಹಮ್ಮದ್ ಪೈಗಂಬರರನ್ನು ಒಬ್ಬ ದೇವದೂತರೆಂದು ನಂಬುತ್ತೇವೋ ಅದೇ ರೀತಿ ಇಸ್ರಾಯಿಲ್ಯರ ಮೋಸೆಸ್‌ರನ್ನೂ ಕ್ರೈಸ್ತರ ಯೇಸು ಕ್ರಿಸ್ತರನ್ನೂ ಭಾರತ ಭೂಮಿಯಲ್ಲಿ ಜನ್ಮವೆತ್ತಿದ ಶ್ರೀ ಕೃಷ್ಣ, ಶ್ರೀ ರಾಮಚಂದ್ರ, ಶ್ರೀ ಬುದ್ಧ ಮೊದಲಾದವರನ್ನೂ ಪರಮಾತ್ಮನ ಸಂದೇಶವಾಹಕರಾದ ಸತ್ಯದೂತರೆಂದು ನಂಬುತ್ತೇವೆ. ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಖುರಾನಿನ ಈ ಪ್ರಬೋಧನೆಯ ಆಧಾರದ ಮೇಲೆ ಈ ಕುರಿತು ಬಹಳವಾಗಿ ಹೇಳಿರುವರು. ಮಹಾತ್ಮಾ ಶ್ರೀ ಕೃಷ್ಣರು ಒಬ್ಬ

ದೈವ ನಿಯುಕ್ತ ಪ್ರವಾದಿಯಾಗಿದ್ದರು ಎಂದು ತಿಳಿಸಿಕೊಡುವ ಅವರ ಹೇಳಿಕೆಗಳಲ್ಲಿ ಒಂದನ್ನು ನಾನು ಸಭಿಕರ ಮುಂದೆ ಕೇಳಿಸಲಿಚ್ಛಿಸುತ್ತೇನೆ. ಅವರು ಹೇಳುತ್ತಾರೆ:— "ನನಗೆ ಪರಮಾತ್ಮನು ತಿಳಿಸಿಕೊಟ್ಟಿರುವಂತೆ ಮಹಾರಾಜ್ ಕೃಷ್ಣ ಯಥಾರ್ಥದಲ್ಲಿ ಪರಿಪೂರ್ಣನಾದ ಒಬ್ಬ ಮಹಾತ್ಮರಾಗಿದ್ದರು. ಹಿಂದುಗಳ ಋಷಿಗಳಲ್ಲೂ ಅವತಾರ ಪುರುಷರಲ್ಲೂ ಅವರಿಗೆ ತುಲ್ಯರಾದವರು ಬೇರಾರೂ ಇಲ್ಲ. ಅವರು ದೇವರಿಂದ ದಿವ್ಯವಾಣಿ ಲಭಿಸುತ್ತಿದ್ದ ಒಬ್ಬ ಅವತಾರ ಪುರುಷ ಅಥವಾ ಪ್ರವಾದಿ ಆಗಿದ್ದರು. ಅವರು ಆರ್ಯಾವರ್ತವನ್ನು ಪಾಪದಿಂದ ವಿಮೋಚಿಸಿದ ಒಬ್ಬ ಅನುಗ್ರಹೀತ ವ್ಯಕ್ತಿಯಾಗಿದ್ದರು. ನಿಜವಾಗಿಯೂ ಅವರು ತನ್ನ ಕಾಲದ ಒಬ್ಬ ಪ್ರವಾದಿಯಾಗಿದ್ದರು. ಆದರೆ ಅವರ ಪ್ರಬೋಧನೆಗಳೆಲ್ಲವೂ ಕಾಲಾಂತರದಲ್ಲಿ ಬಹಳಷ್ಟು ಮಾರ್ಪಾಟಿಗೆ ಗುರಿಯಾಯಿತು. ಅವರಾದರೋ ದೈವಪ್ರೇಮದಲ್ಲಿ ಅನುರಕ್ತರೂ ಧರ್ಮವನ್ನು ಪ್ರೀತಿಸಿ ಅಧರ್ಮವನ್ನು ವಿರೋಧಿಸಿದ ಒಬ್ಬ ಪುಣ್ಯಾತ್ಮರೂ ಆಗಿದ್ದರು. (ಲೆಕ್ಚರ್ ಸಿಯಾಲ್‌ಕೋಟ್, ಪುಟ 33-34)

ಮಹಾತ್ಮಾ ಶ್ರೀ ಕೃಷ್ಣರ ಕುರಿತು ಇಸ್ಲಾಂ ಮತ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರರು ಹೇಳಿದುದನ್ನು ಕಾಣಿರಿ: "ಕಾನ ಫಿಲ್ ಹಿಂದಿ ನಬಿಯ್ಯುನ್ ಅಸ್‌ವದ.ಲ್ಲೌನಿ ಇಸ್‌ಮುಹು ಕಾಹಿನಾ'' ಎಂದರೆ "ಭಾರತದಲ್ಲಿ ಕೃಷ್ಣವರ್ಣದ ಒಬ್ಬ ಪ್ರವಾದಿಯು ಅವತರಿಸಿದ್ದರು; ಅವರ ಹೆಸರು ಕಾಹಿನಾ ಎಂದಾಗಿತ್ತು. ಕಾಹಿನಾ ಎಂಬುದು ಕೃಷ್ಣ ಎಂಬ ಹೆಸರಿನ ಅರಬೀ ಭಾಷೆಯ ರೂಪಭೇದವಾಗಿರಬಹುದೆಂದು ತಿಳಿಯಬೇಕಾಗಿದೆ. ಈ ರೀತಿ ಇಸ್ಲಾಂ ಧರ್ಮವು ಅನ್ಯ ಮತಸ್ಥರೆಡೆಯಲ್ಲಿ ಅವತರಿಸಿದ ಮಹಾಪುರುಷರ ಸತ್ಯತೆಯನ್ನು ಅಂಗೀಕರಿಸಬೇಕೆಂದೂ ಅವರನ್ನು ಬಹುಮಾನಾದರಗಳಿಂದ ಕಾಣಬೇಕೆಂದೂ ಆಜ್ಞಾಪಿಸುತ್ತಾ ಸಮುದಾಯ ಮೈತ್ರಿಗೆ ಅತಿ ಮಹತ್ತಾದ ಒಂದು ಬುನಾದಿಯನ್ನು ಹಾಕಿದೆ. ಎಲ್ಲಾ ಪ್ರವಾದಿಗಳಲ್ಲಿ ವಿಶ್ವಾಸವಿಡುವಂತೆ ಪವಿತ್ರ ಖುರಾನ್ ಮುಸ್ಲಿಮರೊಡನೆ ಆಜ್ಞಾಪಿಸಿದೆ. ಮುಹಮ್ಮದ್ ಪೈಗಂಬರರನ್ನೂ ಇಸ್ರಾಯೀಲ್ಯ ಪ್ರವಾದಿಗಳನ್ನೂ ಮಾತ್ರವೇ ಅಂಗೀಕರಿಸಿಕೊಂಡು ಉಳಿದ ಪ್ರವಾದಿಗಳನ್ನು ತಿರಸ್ಕರಿಸುವುದಾದರೆ ಅಂತಹವರು ಇಸ್ಲಾಂ ಧರ್ಮದಲ್ಲಿ ಒಳಪಡುವುದಿಲ್ಲ. ಸೂಕ್ಷ್ಮವಾಗಿ ಪರಿಶೀಲಿಸುವುದಾದರೆ ಮಾನವರನ್ನು ಆಧ್ಯಾತ್ಮಿಕ ಮೌಲ್ಯದತ್ತ ಆಹ್ವಾನಿಸಿ ದೈವಜ್ಞಾನವನ್ನು ಜನರಿಗೆ ಬೋಧಿಸಲು ನಿಯುಕ್ತರಾದ ಎಲ್ಲಾ ಪ್ರವಾದಿಗಳ ಮೂಲವೂ ಜಗತ್ಪಾಲಕನಾದ ಪರಮಾತ್ಮನಾಗಿರುವನು ಎಂದು ಹಿಂದೂ ಮತದ ಅಧಿಕೃತ ಧರ್ಮಗ್ರಂಥವಾದ ಶ್ರೀಮದ್ಭಗವದ್ಗೀತೆಯಲ್ಲೂ ಕಾಣಬಹುದು. ಮಾನವ ಕುಲದ ಆಧ್ಯಾತ್ಮಿಕ ಕೇಂದ್ರಬಿಂದುವು ಒಬ್ಬನೇ ಆದ ಪರಮಾತ್ಮನಾಗಿರುವನೆಂದೂ ಮನುಷ್ಯರು ತಮ್ಮ ಸರ್ವಸ್ವವನ್ನೂ ಆ ಪರಮಾತ್ಮನಲ್ಲಿಯೇ ಅರ್ಪಿಸಿ ಅವನನ್ನೇ ಧ್ಯಾನಿಸಬೇಕೆಂದೂ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣರು ಘೋಷಿಸಿರುವರು. ಆ ಮಹಾಗ್ರಂಥದ 18ನೇ ಅಧ್ಯಾಯದ 61 ಮತ್ತು 62ನೇ ಶ್ಲೋಕಗಳನ್ನು ನಾವು ಈ ರೀತಿ ಓದುತ್ತೇವೆ:

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್॥

"ಎಲೈ ಅರ್ಜುನ, ಸರ್ವ ಪ್ರಾಣಿಗಳನ್ನು ಯಂತ್ರಾರೂಢವಾದ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತಾ ಈಶ್ವರನು ಸರ್ವ ಜೀವರ ಹೃದಯ ಪ್ರದೇಶದಲ್ಲಿ ನೆಲೆಸಿರುತ್ತಾನೆ. ಎಲೈ ಅರ್ಜುನ, ಸರ್ವಾತ್ಮನಾ ಅವನನ್ನೇ ಶರಣುಹೊಂದು. ಅವನ ಅನುಗ್ರಹದಿಂದ ಪರಮಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುವೆ. (ಭಗವದ್ಗೀತೆ ಅಧ್ಯಾಯ 18; ಶ್ಲೋಕ 61, 62).

ಇಲ್ಲಿ ಧಾರ್ಮಿಕವಾದ ಎಲ್ಲಾ ಕಾರ್ಯಗಳ ಮೂಲ ಸ್ಥಾನವು ಪರಮಾತ್ಮನಾಗಿರುವನೆಂದೂ ಅವನನ್ನು ಮಾತ್ರವೇ ಮನುಷ್ಯರು ಆಶ್ರಯಿಸಬೇಕೆಂದೂ ಹೇಳಿದೆ. ಇದೇರೀತಿ ಭಗವದ್ಗೀತೆಯನ್ನು ಬೋಧಿಸಿದ ಮಹಾತ್ಮಾ ಶ್ರೀ ಕೃಷ್ಣರು ತನಗೆ ಮೊದಲೂ ದೇವರ ಅವತಾರ ಪುರುಷರು ಅವತರಿಸಿರುವರೆಂದು ಹೇಳಿರುವರು. ನಿಜವಾಗಿ ಹೇಳುವುದಾದರೆ, ಮನುಷ್ಯರು ಅಧರ್ಮದಲ್ಲಿ ಮುಳುಗಿ ಆಧ್ಯಾತ್ಮಿಕವಾಗಿ ಅಧಃಪತನ ಹೊಂದುವಾಗ

ಅವರನ್ನು ಉದ್ಧರಿಸಲಿಕ್ಕೂ ಅವರಿಗೆ ದೈವಜ್ಞಾನವನ್ನು ತಿಳಿಸಿಕೊಡಲಿಕ್ಕೂ ಲೋಕದಲ್ಲಿ ಪ್ರವಾದಿಗಳು ಅವತರಿಸುತ್ತಾರೆ. ಆರೀತಿ ಅವತರಿಸಿದ ಎಲ್ಲಾ ಧರ್ಮ ಗುರುಗಳ ಮೂಲವೂ ಒಂದೇ ಆಗಿರುತ್ತದೆ. ಅದೇ ಸರ್ವವಲ್ಲಭನಾದ ಆ ಪರಮಾತ್ಮ. ಮಹಾತ್ಮಾ ಶ್ರೀ ಕೃಷ್ಣರು ತನಗೆ ಮೊದಲು ಬಂದ ಪ್ರವಾದಿಗಳನ್ನು ಅಂಗೀಕರಿಸುತ್ತಾ ದೈವವಾಣಿಯ ಅವತರಣೆಯ ಕುರಿತು ಈ ರೀತಿ ಘೋಷಿಸುತ್ತಾರೆ:

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹ ಮವ್ಯಯಮ್।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽ ಬ್ರವೀತ್॥
ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ।
ಸಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ॥

"ಈ ಅವ್ಯಯವಾದ ಯೋಗವನ್ನು ನಾನು ವಿವಸ್ವಾನ್‌ನಿಗೆ ಹೇಳಿದೆನು; ಅವನು ಮನುವಿಗೆ ಹೇಳಿದನು. ಮನುವು ಇಕ್ಷ್ವಾಕುವಿಗೆ ಹೇಳಿದನು. ಎಲೈ ಅರ್ಜುನ, ಹೀಗೆ ಪರಂಪರೆಯಿಂದ ಬಂದ ಇದನ್ನು ರಾಜರ್ಷಿಗಳು ತಿಳಿದಿದ್ದರು; ಆ ಯೋಗವು ದೀರ್ಘ ಕಾಲವಾದುದರಿಂದ ಇಲ್ಲಿ ನಷ್ಟವಾಯಿತು''. (ಭಗವದ್ಗೀತೆ ಅಧ್ಯಾಯ 4; ಶ್ಲೋಕ 1 ಮತ್ತು 2). ಹೀಗೆ ದೈವಜ್ಞಾನವು ನಷ್ಟವಾಗಿದ್ದ ಕಾಲದಲ್ಲಿ ಅದನ್ನು ಪುನರುಜ್ಜೀವನಗೊಳಿಸಲು ತಾನು ಬಂದಿರುವೆನೆಂದು ಶ್ರೀ ಕೃಷ್ಣರು ತನ್ನ ದೌತ್ಯವು ಯುಕ್ತ ಕಾಲದಲ್ಲಿಯೇ ಉಂಟಾಯಿತೆಂಬುದನ್ನು ವ್ಯಕ್ತಪಡಿಸಿದರು.

ಲೋಕದಲ್ಲಿ ದೈವವಾಣಿಯು ಅಗತ್ಯವಿರುವಾಗಲೆಲ್ಲಾ ಪರಮಾತ್ಮನು ಅದನ್ನು ಮನುಷ್ಯರಿಗೆ ಅನುಗ್ರಹಿಸುತ್ತಾನೆ. ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ಲೋಕದಲ್ಲಿ ನಿಯುಕ್ತರಾಗಿರುವರೆಂದು ಮುಹಮ್ಮದ್ ಪೈಗಂಬರರು ಹೇಳಿದರು. ಅವರೆಲ್ಲರನ್ನು ಅಂಗೀಕರಿಸಬೇಕಾದುದು ಮುಸ್ಲಿಮರ ಧರ್ಮವಾಗಿರುತ್ತದೆ. ಅವರಲ್ಲಿ ಮೋಸೆಸ್, ಜೀಸಸ್, ಝೊರಾಸ್ಟರ್, ಕನ್‌ಫ್ಯೂಸಿಯಸ್, ಶ್ರೀ ಕೃಷ್ಣ, ಶ್ರೀ ರಾಮಚಂದ್ರ, ಶ್ರೀ ಬುದ್ಧ ಮೊದಲಾದ ಎಲ್ಲಾ ಮಹಾತ್ಮರೂ ಒಳಪಡುತ್ತಾರೆ. ಹೀಗಿರುವಾಗ ಇವರನ್ನು ಆದರ ಭಾವದಿಂದ ಕಾಣದ, ಇವರ ಸತ್ಯತೆಯನ್ನು ಅಂಗೀಕರಿಸದ ಓರ್ವನಿಗೆ ಮುಸ್ಲಿಮನಾಗಿರಲು ಸಾಧ್ಯವಿಲ್ಲ. ಆದುದರಿಂದ ಅಹ್ಮದೀಯರಾದ ನಮ್ಮ ವಿಶ್ವಾಸವು, ಇವರೆಲ್ಲಾ ಸತ್ಯಪ್ರವಾದಿಗಳಾಗಿದ್ದಾರೆ ಎಂದಾಗಿದೆ. ಇವರನ್ನು ಅಂಗೀಕರಿಸಿದರೆ ಮಾತ್ರವೇ ನಾವು ಮುಸ್ಲಿಮರಾಗುತ್ತೇವೆ. ಇಲ್ಲವಾದರೆ ನಮಗೆ ಮುಸ್ಲಿಮರಾಗಲಿಕ್ಕೆ ಸಾಧ್ಯವಿಲ್ಲ. ನೋಡಿದಿರಾ, ಇದೇ ರೀತಿಯ ತತ್ವಗಳನ್ನು ಲೋಕದ ಎಲ್ಲಾ ಮತಸ್ಥರೂ ಸ್ವೀಕರಿಸುವುದಾದರೆ, ಧರ್ಮದ ಹೆಸರಿನಲ್ಲಿ ನಡೆಯುವ ಅತ್ಯಾಚಾರಗಳು ಇಲ್ಲದಾಗುವುದರಲ್ಲಿ ಸಂದೇಹವಿಲ್ಲ. ಮುಸ್ಲಿಮರು ಎಂದೂ ಅನ್ಯ ಮತಸ್ಥಾಪಕರನ್ನೂ ಮತಾಚಾರ್ಯರನ್ನೂ ದೂಷಿಸುವುದಿಲ್ಲ; ಹೀಯಾಳಿಸುವುದಿಲ್ಲ. ಆದುದರಿಂದ ಇಲ್ಲಿ ನೆರೆದಿರುವ ನನ್ನ ಹಿಂದೂ ಬಾಂಧವರೊಡನೆ ನಾನು ಅಪೇಕ್ಷಿಸುವುದೇನೆಂದರೆ ಅವರು ಎಂದೂ ಇಸ್ಲಾಂ ಧರ್ಮದ ಸ್ಥಾಪಕರನ್ನು ಅವಹೇಳಿಸದೆಯೂ ಆಕ್ಷೇಪಿಸದೆಯೂ ಇರಲಿ. ಸಹೋದರರೇ, ಚೆನ್ನಾಗಿ ಆಲೋಚಿಸಿ ನೋಡಿರಿ, ಮುಹಮ್ಮದ್ ಪೈಗಂಬರರನ್ನು ಹೀನವಾಗಿ ಕಾಣುವ ಒಂದು ಸಮುದಾಯದೊಡನೆ ಮುಸ್ಲಿಮರಿಗೆ ಮೈತ್ರಿಯಿಂದಿರಲು ಸಾಧ್ಯವೇ? ಅದೇ ರೀತಿ ಶ್ರೀ ಕೃಷ್ಣರನ್ನೂ ಶ್ರೀ ರಾಮಚಂದ್ರರನ್ನೂ ನಿಂದಿಸುವ ಒಂದು ಸಮುದಾಯದೊಡನೆ ಸೌಹಾರ್ದದಿಂದ ವರ್ತಿಸಲು ಹಿಂದುಗಳಿಗೆ ಸಾಧ್ಯವಿದೆಯೇ? ಖಂಡಿತವಾಗಿಯೂ ಇಲ್ಲ. ಆದುದರಿಂದ ನಾವು ಪರಸ್ಪರ ಸೌಹಾರ್ದದಿಂದಲೂ ಬಹುಮಾನದಿಂದಲೂ ಆದರಭಾವದಿಂದಲೂ ವರ್ತಿಸಲು ಕಲಿಯೋಣ. ಲೋಕದಲ್ಲಿ ಶಾಶ್ವತ ಶಾಂತಿ ನೆಲೆಸಬೇಕೆಂದಾದರೆ ಇದೊಂದೇ ಮಾರ್ಗ. ಅಲ್ಲದೆ ನಾವು ಪರಸ್ಪರ ಆಕ್ಷೇಪಿಸುತ್ತಲೂ ನಿಂದಿಸುತ್ತಲೂ ಇರುವುದಾದರೆ ಅದರಿಂದುಂಟಾಗುವ ಕೆಟ್ಟ ಫಲವು ನಮ್ಮ ರಾಷ್ಟ್ರವನ್ನೇ ಅಧಃಪತನಕ್ಕೆ ತಳ್ಳಿಬಿಡಬಹುದು. ಸಮುದಾಯಗಳು ಪರಸ್ಪರ ಶಾಂತಿ ಸೌಹಾರ್ದದಿಂದ ವರ್ತಿಸಲು ತೊಡಗಿ, ಕಲಹ ಗೊಂದಲಗಳನ್ನೂ ನಾಶನಷ್ಟಗಳನ್ನೂ ಉಂಟುಮಾಡುವ ದುಷ್ಕೃತ್ಯಗಳಿಂದ ವಿಮುಖರಾಗದೆ ಇರುವುದಾದರೆ ಲೋಕದಲ್ಲಿ ಅತಿ ಭಯಂಕರವಾದ ವಿಪತ್ತುಗಳು ಉಂಟಾಗಲಿರುವುದೆಂದು ಈ ಯುಗದ ಅವತಾರ ಪುರುಷರಾಗಿ ಜನ್ಮತಾಳಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ

ಅವರು ನಮಗೆ ಮುನ್ನೆಚ್ಚರಿಕೆ ನೀಡಿದ್ದಾರೆ. ಅವರು ತನ್ನ ಪೈಗಾಮೆ ಸುಲ್ಹ್ ಎಂಬ ಗ್ರಂಥದಲ್ಲಿ ಈ ರೀತಿ ಹೇಳುತ್ತಾರೆ:-

"ಪರಮಾತ್ಮನು ನನಗೆ ತಿಳಿಸಿರುವನು: ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಕುಕೃತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ ಕ್ಷಮೆ ಯಾಚಿಸದೆ ಇದ್ದರೆ ಲೋಕದಲ್ಲೆಲ್ಲಾ ಭಯಂಕರವಾದ ವಿಪತ್ತುಗಳೂ ನಾಶ ನಷ್ಟಗಳೂ ಸಂಭವಿಸುವುವು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದಾಗಿ ಮನುಷ್ಯರು ದಿಗ್ಭ್ರಾಂತರಾಗಿ, ಇನ್ನೇನು ಸಂಭವಿಸಲಿದೆಯೆಂದು ಕೇಳಲಾರಂಭಿಸುವರು. ಆದುದರಿಂದ. ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ ಹಿಂದುಗಳೂ ಮುಸ್ಲಿಮರೂ ಪರಸ್ಪರ ಸಂಧಾನವನ್ನುಂಟುಮಾಡಲಿ. ಐಕ್ಯಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯವನ್ನು ತ್ಯಜಿಸಲಿ. ಇಲ್ಲವಾದರೆ ಅನ್ಯೋನ್ಯ ಶತ್ರುತ್ವದ ಎಲ್ಲಾ ಪಾಪವು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು".

ವಿವಿಧ ಮತಸ್ಥರ ಧಾರ್ಮಿಕ ವಿಶ್ವಾಸಗಳು ವಿಭಿನ್ನವಾಗಿರುವಾಗ ಅವರು ಪರಸ್ಪರ ಮೈತ್ರಿಯಿಂದಿರುವುದು ಹೇಗೆ? ಎಂಬ ಒಂದು ಪ್ರಶ್ನೆಯು ಇಲ್ಲಿ ಉದ್ಭವವಾಗಬಹುದು. ಅದಕ್ಕೆ ಹಜ್ರತ್ ಅಹ್ಮದ್ ಅವರು ನಿರ್ದೇಶಿಸುವ ಪರಿಹಾರವು, ವಿಶ್ವಾಸಾದರ್ಶಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ ಒಂದು ಸಮುದಾಯವು ಬಹುಮಾನಿಸಿ ಆದರಿಸುವ ಮಹಾ ಪುರುಷರನ್ನೋ ಮತಸ್ಥಾಪಕರನ್ನೋ ಇನ್ನೊಂದು ಸಮುದಾಯವು ಹೀನೈಸಬಾರದೆಂಬ ತತ್ವವಾಗಿದೆ; ಅನ್ಯ ಮತಸ್ಥಾಪಕರನ್ನೂ ಮಹಾ ಪುರುಷರನ್ನೂ ಆತ್ಮಾರ್ಥವಾಗಿ ಗೌರವಿಸಬೇಕೆಂಬ ತತ್ವವಾಗಿದೆ. ಯಾವ ಧರ್ಮದಲ್ಲಿ ವಿಶ್ವಾಸವಿಡುವವರೇ ಆದರೂ ಪರಸ್ಪರ ಸ್ನೇಹಭಾವದಿಂದ ಬಾಳಬೇಕಾಗಿದೆ. ಆದುದರಿಂದ ನಾವು ಪರಸ್ಪರ ಅಭಿಪ್ರಾಯವಿನಿಮಯ ಮಾಡಿಕೊಂಡು ಅನ್ಯೋನ್ಯ ಸೌಹಾರ್ದದಿಂದಲೂ ಸಹಾನುಭೂತಿಯಿಂದಲೂ ಬಂಧುಮಿತ್ರರಂತೆ ಜೀವಿಸಲು ಕಲಿಯಬೇಕಾಗಿದೆ.

ಹೇ ಸರ್ವೇಶ್ವರನಾದ ಪರಮಾತ್ಮನೇ ನಮ್ಮಲ್ಲಿ ಪರಸ್ಪರ ಸ್ನೇಹವನ್ನೂ ಐಕ್ಯ ಭಾವನೆಯನ್ನೂ ಉಂಟು ಮಾಡು. ನಮ್ಮ ಹೃದಯಗಳಲ್ಲಿ ಉಂಟಾಗಬಹುದಾದಂತಹ ಜಾತೀಯತೆಯ ಕಶ್ಮಲಗಳನ್ನು ಹೋಗಲಾಡಿಸಿ ನಾವು ಪರಸ್ಪರ ಸ್ನೇಹಭಾವದಿಂದ ಬಾಳುವಂತೆ ನಮ್ಮನ್ನು ಕಾಪಾಡು. ಲೋಕದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಅತ್ಯಾಚಾರಗಳೂ ಅಕ್ರಮಗಳೂ ಕೊನೆಗೊಳ್ಳಲಿ. ಭಗವಂತಾ, ನಮ್ಮನ್ನು ನೀನು ಸದಾ ಅನುಗ್ರಹಿಸಿ ಆಶೀರ್ವದಿಸು-ಎಂಬ ಪ್ರಾರ್ಥನೆಯೊಂದಿಗೆ ನನ್ನೀ ಮಾತುಗಳನ್ನು ಮುಗಿಸುತ್ತೇನೆ.

ಜಾತೀಯತೆ ತೊಲಗಲಿ, ಮಾನವೀಯತೆ ಬೆಳಗಲಿ.

ಮನುಷ್ಯತ್ವಕ್ಕೆ ಜಯವಾಗಲಿ, ಇನ್‌ಸಾನಿಯತ್ ಜಿಂದಾಬಾದ್.

ಜೈಜಗತ್.

—o—o—o—



## "ತವನಿಧಿ"ಗೆ ಒಂದು ಪ್ರತಿಕ್ರಿಯೆ

# ಅಹ್ಮದಿಯಾ ಜಮಾಅತ್

—ಸಿದ್ದೀಖ್ ಅಶ್ರಫಲಿ

[ಪ್ರಸ್ತುತ ಲೇಖನವು "ತವನಿಧಿ'' ಮಾಸಪತ್ರಿಕೆಯಲ್ಲಿ ಅಹ್ಮದಿಯಾ ಸಂಘಟನೆಯ ಕುರಿತು ಪ್ರಕಟವಾದ ಒಂದು ಲೇಖನಕ್ಕೆ ಪ್ರತಿಕ್ರಿಯೆಯಾಗಿದ್ದು, ತವನಿಧಿಯಲ್ಲಿ ಪ್ರಕಟಿಸುವರೆ ಅದರ ಸಂಪಾದಕರೊಡನೆ ಅಪೇಕ್ಷಿಸಲಾಗಿತ್ತು. ಸಂಪಾದಕರು ಅದನ್ನು ವಿಮರ್ಶಾಪೂರ್ವಕವಾಗಿ ಓದಿ ನೋಡಿ, ಲೇಖಕರು ಬರೆದ ವಿಚಾರಗಳು ಮತ್ತು ಮುಂದಿಟ್ಟ ವಾದಗಳು ಉತ್ತಮವಾಗಿವೆ ಎಂದು ಮೆಚ್ಚಿಕೊಂಡರೂ, ಈ ಲೇಖನವನ್ನು ತವನಿಧಿಯಲ್ಲಿ ಪೂರ್ಣವಾಗಿ ಪ್ರಕಟಿಸಿದರೆ "ತವನಿಧಿ ಬಗ್ಗೆ ತಪ್ಪು ಕಲ್ಪನೆಗೆ ಕಾರಣವಾಗಬಹುದು'' ಎಂದು ಉತ್ತರ ಬರೆದು ತನ್ನ ಅಶಕ್ಯತೆಯನ್ನು ವ್ಯಕ್ತಪಡಿಸಿದರು. ಅದರ ಅತಿ ಚಿಕ್ಕ ಒಂದು ಭಾಗವನ್ನು ಮಾತ್ರ ಮೇ ಸಂಚಿಕೆಯ 'ಸಮಾಲೋಚನೆ' ಭಾಗದಲ್ಲಿ ಪ್ರಕಟಿಸಿದರು. ಆ ಲೇಖನವನ್ನು ಪೂರ್ಣವಾಗಿ ಪ್ರಕಟಿಸುವ ಆವಶ್ಯಕತೆಯನ್ನು ಮನಗಂಡುದುದರಿಂದ 'ಯುಗರಶ್ಮಿ'ಯಲ್ಲಿ ಅದನ್ನು ಪ್ರಕಟಿಸಲು ನಾವು ನಿರ್ಬಂಧಿತರಾಗಿದ್ದೇವೆ. — ಸಂ.]

"ತವನಿಧಿ'ಯ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಜನಾಬ್ ಯು. ಪಿ. ಉಮರಬ್ಬ, ಬಿ. ಎ., ಬಿ. ಎಡ್. ವೇಣೂರು ಎಂಬವರ "ಅಹ್ಮದೀಯ ಪಂಥ (ಖಾದಿಯಾನಿಗಳು)'' ಎಂಬ ಶಿರೋನಾಮೆಯಲ್ಲಿ ಒಂದು ಲೇಖನವು ಪ್ರಕಟವಾದುದನ್ನು ಕಾಣಲೆಡೆಯಾಯಿತು. ಈ ಲೇಖನದಲ್ಲಿ ಲೇಖಕರು ಅಹ್ಮದಿಯಾ ಸಂಘಟನೆಯನ್ನು ಆಧಾರರಹಿತವಾಗಿ ಆಕ್ಷೇಪಿಸುತ್ತಾ ಅನೇಕ ತಪ್ಪಾದ ಸಂಗತಿಗಳನ್ನು ವಿವರಿಸಿರುವರು.

ಅಹ್ಮದಿಯರು ಮುಸ್ಲಿಮರು. ಅವರಿಗೆ ಹೊಸತಾದ ಯಾವುದೇ ಧರ್ಮವಿಲ್ಲ. ಅವರ ಧರ್ಮವು ಇಸ್ಲಾಂ ಆಗಿದೆ. "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್'' ಎಂಬುದೇ ಅಹ್ಮದಿಯರ ಕಲಿಮವಾಗಿದೆ. ಅವರ ಖಿಬಿಲ ಕಅಬವಾಗಿದೆ. ಇಸ್ಲಾಮಿನ ಎಲ್ಲಾ ಮೂಲಭೂತ ತತ್ವಗಳಲ್ಲೂ ಅವರು ವಿಶ್ವಾಸವುಳ್ಳವರಾಗಿದ್ದಾರೆ. ಅವರ ಧರ್ಮಗ್ರಂಥ ಖುರ್‌ಆನ್ ಆಗಿದೆ. ಪವಿತ್ರ ಖುರ್‌ಆನ್ ಒಂದು ಪರಿಪೂರ್ಣ ಮತಗ್ರಂಥವೆಂದೂ ಲೋಕಾಂತ್ಯದ ವರೆಗೆ ಅದು ಮನುಷ್ಯಕುಲಕ್ಕೆ ಮಾರ್ಗದರ್ಶಿಯಾಗಿರುವುದೆಂದೂ ಅವರು ನಂಬುತ್ತಾರೆ. ಹಜ್ರತ್ ಮುಹಮ್ಮದ್ ಪೈಗಂಬರ್ (ಸ)ರು ಖಾತಮುನ್ನಬಿಯ್ಯೀನ್ ಅಥವಾ ಸರ್ವ ಪ್ರವಾದಿಗಳಲ್ಲೂ ಶ್ರೇಷ್ಠರೆಂದು ಅವರು ನಂಬುತ್ತಾರೆ. ಆ ಪ್ರವಾದಿಶ್ರೇಷ್ಠರನ್ನು ಅನುಸರಿಸದೆ ಯಾವುದೇ ದೈವಿಕಾನುಗ್ರಹಗಳು ಲಭ್ಯವಲ್ಲವೆಂದೂ ಅವರು ನಂಬುತ್ತಾರೆ.

ಮುಸ್ಲಿಂ ಸಮುದಾಯವು ಮುಂದೊಂದು ಕಾಲದಲ್ಲಿ ಅತ್ಯಂತ ಶೋಚನೀಯ ಸ್ಥಿತಿಗೆ ತಲಪುವುದೆಂದೂ ಇಸ್ಲಾಮಿನ ನಾಮವೂ ಖುರ್‌ಆನಿನ ಲಿಪಿಯೂ ಮಾತ್ರವೇ ಬಾಕಿಯಾಗಲಿರುವುದೆಂದೂ ಈ ಶೋಚನೀಯ ಅವಸ್ಥೆಯಿಂದ ಮುಸ್ಲಿಮರನ್ನು ಸಂರಕ್ಷಿಸಲಿಕ್ಕಾಗಿ ಓರ್ವ ಮಹದೀ ಮಸೀಹ್ ಅವತರಿಸಲಿರುವರೆಂದೂ ಹಜ್ರತ್ ಮುಹಮ್ಮದ್ ಪೈಗಂಬರ್ (ಸ) ಭವಿಷ್ಯ ನುಡಿದಿರುವರು. ಈ ಭವಿಷ್ಯವಾಣಿಯ ಪ್ರಕಾರ ಅಲ್ಲಾಹುವಿನಿಂದ ನಿಯುಕ್ತನಾದ ಮಹದೀ ಮಸೀಹ್ ತಾನಾಗಿರುವೆನೆಂದು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಜ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿಯವರು ವಾದಿಸಿರುವರು. ಹಜ್ರತ್ ಮುಹಮ್ಮದ್ ಪೈಗಂಬರ್ (ಸ)ರು ಭವಿಷ್ಯ ನುಡಿದ ಪ್ರಕಾರವೇ ಮುಸ್ಲಿಮರಿಗೆ ಆ ಶೋಚನೀಯ ಸ್ಥಿತಿಯು ಬಂದೊದಗಿರುವುದೆಂಬುದು ಎಲ್ಲರೂ ಸಮ್ಮತಿಸುವ ಒಂದು ಕಟುಸತ್ಯವಾಗಿದೆ. ಅಂತೆಯೇ ಅದರ ಪರಿಹಾರಾರ್ಥವಾಗಿ ವಾಗ್ದಾನ ಮಾಡಲ್ಪಟ್ಟ ಮಹದೀ

ಮಸೀಹ್ ಆವಿರ್ಭವಿಸಬೇಕಾದುದು ಅಗತ್ಯವಲ್ಲವೇ ? ಸಂಕ್ಷಿಪ್ತವಾಗಿ, ಇಸ್ಲಾಮಿನ ಪುನರುಜ್ಜೀವನಕ್ಕಾಗಿರುವ ದೈವಿಕ ಏರ್ಪಾಡೇ "ಅಹ್ಮದಿಯಾತ್'' ಆಗಿದೆ.

ಅಹ್ಮದಿಯರ ವಿಶ್ವಾಸಾದರ್ಶಗಳ ಆಧಾರವು ಪವಿತ್ರ ಖುರ್‌ಆನ್ ಆಗಿದೆ. ಪವಿತ್ರ ಖುರ್‌ಆನ್ ಒಂದು ಸಂಪೂರ್ಣ ಧರ್ಮ ಗ್ರಂಥವೆಂದು ಅವರು ನಂಬುತ್ತಾರೆ. ಅದರ ಒಂದೇ ಒಂದು ವಚನವಾಗಲೀ ದುರ್ಬಲವಾಗಿಲ್ಲವೆಂದೂ ದುರ್ಬಲವಾಗಲಾರದೆಂದೂ ಅವರ ವಿಶ್ವಾಸ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಈ ರೀತಿ ಹೇಳುತ್ತಾರೆ: "ಅಲ್ಲಾಹುವಿನ ಉಪದೇಶ ನಿರ್ದೇಶಗಳಿಗೆದುರಾಗಿ ಒಂದು ಹೆಜ್ಜೆಯನ್ನಾದರೂ ಇಡಬಾರದು... .... ಯಾವನೇ ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳ ಪೈಕಿ ಒಂದನ್ನಾದರೂ ಉಲ್ಲಂಘಿಸುವನಾದರೆ ಅವನು ಮೋಕ್ಷದ ಬಾಗಿಲನ್ನು ತನ್ನ ಸ್ವಂತ ಕೈಗಳಿಂದಲೇ ಮುಚ್ಚುವವನಾಗಿದ್ದಾನೆ.''

ಹೀಗಿರುವಾಗ ಹಝ್ರತ್ ಅಹ್ಮದರ ಮಗನೂ ಶಿಷ್ಯನೂ ಆಗಿದ್ದ ಮಿರ್ಝಾ ಬಶೀರದ್ದೀನ್ ಮಹಮೂದ್ ಅಹ್ಮದ್ "ಖುರಾನಿನ ಮೇಲೆ ಬರೆದ ಎರಡು ಟೀಕಾಗ್ರಂಥಗಳು ಖುರಾನಿಗೆ ವ್ಯತಿರಿಕ್ತವಾಗಿವೆ'' ಎಂದು ಜನಾಬ್ ಉಮ್ಮರಬ್ಬನವರು ಹೇಳಿದುದು ಸತ್ಯವಿರುದ್ಧವಾಗಿದೆ. ತದ್ವಿರುದ್ಧವಾಗಿ ಪವಿತ್ರ ಖುರ್‌ಆನಿನ ಮಹತ್ವವನ್ನು ವ್ಯಕ್ತಗೊಳಿಸುವ ಅನೇಕ ಗ್ರಂಥಗಳನ್ನು ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಅವರು ಬರೆದಿದ್ದಾರೆ

ಅಹ್ಮದಿಯರು ಖಾದಿಯಾನನ್ನು 'ಮಕ್ಕಾ'ವೆಂದೂ ಲಾಹೋರನ್ನು 'ಮದೀನ'ವೆಂದೂ ನಂಬುತ್ತಾರೆಂಬ ಅರ್ಥದಲ್ಲಿ ಲೇಖಕರು ಬರೆದಿರುವರು. ಇದು ಸರಿಯಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರೂ ಅನುಚರರೂ ಯಾವ ಉನ್ನತ ಸ್ಥಾನವನ್ನು ಮಕ್ಕಾ ಹಾಗೂ ಮದೀನಕ್ಕೆ ಕೊಟ್ಟಿದ್ದರೋ ಅದೇ ರೀತಿಯ ಸ್ಥಾನವನ್ನು ನಾವು ಸಹ ಆ ಪವಿತ್ರ ನಗರಗಳಿಗೆ ಕಲ್ಪಿಸುತ್ತೇವೆ. ಅಹ್ಮದಿಯಾ ಸಂಘಟನೆಯ ಈಗಿನ ಖಲೀಫರಾದ ಹಝ್ರತ್ ಮಿರ್ಝಾನಾಸಿರ್ ಅಹ್ಮದ್ ಅವರು ಇತ್ತೀಚೆಗಿನ ತನ್ನ ಒಂದು ಭಾಷಣದಲ್ಲಿ ಈರೀತಿ ಹೇಳಿದ್ದಾರೆ: "ಮಕ್ಕಾ ಮತ್ತು ಮದೀನಾ ನಗರಗಳ ಮೇಲೆ ನಮಗೆ ಎಷ್ಟು ಗೌರವಾದರಗಳಿವೆಯೆಂದರೆ, ಮುಹಮ್ಮದ್ ಪೈಗಂಬರ್ (ಸ)ರ ಅನುಗ್ರಹೀತ ಪಾದಸ್ಪರ್ಶನದಿಂದ ಪುನೀತವಾದ ಆ ಪುಣ್ಯ ಸ್ಥಳಗಳ ಮಳಲಿನ ಹರಳಿಗಾಗಿ ಲೋಕದ ಬೇರಾವುದೇ ನಗರಗಳು ಬಲಿಯರ್ಪಿತವಾಗಲು ಅರ್ಹವಾಗಿದೆಯೆಂದು ನಾವು ಭಾವಿಸುತ್ತೇವೆ.'' (21-1-1974ರಂದು ರಬ್ವಾದಲ್ಲಿ ಮಾಡಿದ ಭಾಷಣ.)

ಲೇಖಕನ ಇನ್ನೊಂದು ಆಕ್ಷೇಪವು ಈ ರೀತಿಯಾಗಿದೆ: "ಬ್ರಿಟಿಷರು ಇವರಿಗೆ ಪೋಷಕರಾಗಿ, ಈ ಮತದ ಪ್ರಚಾರಕ್ಕಾಗಿ ಅಪಾರ ಹಣ ವ್ಯಯಿಸುತ್ತಿದ್ದರು. ಹಾಗಾಗಿ ಪಂಜಾಬ್ ಮತ್ತು ಬೊಂಬಾಯಿಯ ಕೆಲವು ಭಾಗಗಳಲ್ಲಿ ಈ ಮತವು ಬೆಳೆಯಿತು.'' ಬ್ರಿಟಿಷರ ಕಾಲದಲ್ಲಿ ಎದುರಾಳಿಗಳು ಮಿರ್ಝಾ ಸಾಹೆಬರನ್ನೂ ಸಂಘಟನೆಯನ್ನೂ ಬ್ರಿಟಿಷ್ ಸರಕಾರವನ್ನು ಉರುಳಿಸುವ ಪ್ರಯತ್ನದಲ್ಲಿದ್ದವರೆಂದು ಆರೋಪಿಸುತ್ತಿದ್ದರು. ಈಗಲಾದರೋ ಅದಕ್ಕೆದುರಾಗಿ ಉಮರಬ್ಬನಂತಹವರು ಅಹ್ಮದಿಯಾ ಸಂಘಟನೆಯು ಬ್ರಿಟಿಷರ ಪೋಷಣೆಯಿಂದ ಹರಡಿತೆಂದು ಆಕ್ಷೇಪಿಸುತ್ತಿದ್ದಾರೆ! ಏನು ವೈಪರೀತ್ಯ! ಬ್ರಿಟಿಷರು ಕ್ರೈಸ್ತಧರ್ಮ ವಿಶ್ವಾಸಿಗಳು. ಅವರು ಯೇಸುಕ್ರಿಸ್ತರನ್ನು ದೇವರೆಂದೂ ದೇವಪುತ್ರನೆಂದೂ ಮಾತ್ರವಲ್ಲ ಈಗಲೂ ಸ್ವರ್ಗದಲ್ಲಿ ಜೀವಂತ ಇರುವರೆಂದೂ ನಂಬುವವರು. ಆದರೆ, ಯೇಸುಕ್ರಿಸ್ತರು ದೇವರೋ ದೈವಪುತ್ರನೋ ಅಲ್ಲವೆಂದೂ ಅವರು ಮೃತರಾಗಿರುವರೆಂದೂ ಹಝ್ರತ್ ಅಹ್ಮದ್ (ಅ) ರವರು ಶಕ್ತಿಯುತವಾಗಿ ವಾದಿಸಿದರು. ಈರೀತಿ ಬ್ರಿಟಿಷರ ವಿಶ್ವಾಸದ ಬೇರನ್ನೇ ನಿರ್ಮೂಲನ ಮಾಡಿದ ಹಝ್ರತ್ ಅಹ್ಮದರ ತತ್ವಪ್ರಚಾರಕ್ಕಾಗಿ ಬ್ರಿಟಿಷರು ಧನವ್ಯಯ ಮಾಡಿದರೆಂದು ಹೇಳುವುದು ಹಾಸ್ಯಾಸ್ಪದವಾಗಿದೆ.

ಹಝ್‌ರತ್ ಈಸಾ ಯೂಸುಫರೆಂಬ ತಂದೆಯನ್ನು ಹೊಂದಿದ್ದರೆಂದು ಮಿರ್ಝಾ ಗುಲಾಂ ಅಹ್ಮದ್‌ರವರು ಹೇಳಿರುವರೆಂದು ಉಮರಬ್ಬನವರು ಬರೆದಿರುವರು. ಆದರೆ ಹಝ್ರತ್ ಅಹ್ಮದ್‌ರವರು ಈರೀತಿ ಪ್ರಬೋಧಿಸಲಿಲ್ಲ; ಅಹ್ಮದಿಯರು ಹೀಗೆ ನಂಬುವುದೂ ಇಲ್ಲ.

ಖುರ್‌ಆನಿನ ಅನೇಕ ಆಯಾತು ವಿಚಾರಗಳಲ್ಲಿ ತಾನು ಅವತರಿಸಲಿಕ್ಕಿರುವ ಭವಿಷ್ಯನುಡಿ ಇರುವುದಾಗಿಯೂ ತಾನು ಖುರ್‌ಆನಿನಲ್ಲಿ ಹೊಗಳಲ್ಪಟ್ಟಿರುವುದಾಗಿಯೂ ಹಝ್ರತ್ ಮಿರ್ಝಾ ಸಾಹೆಬರು ಹೇಳಿರುವರೆಂದು ಲೇಖಕನು ಹೇಳಿದುದು ಸತ್ಯ. ಏಕೆಂದರೆ,

ಅವರ ವಾದಕ್ಕೆ ಆಧಾರ ಪವಿತ್ರ ಖುರ್‌ಆನೇ ಆಗಿದೆ. ಪವಿತ್ರ ಖುರ್‌ಆನಿನಲ್ಲಿ ಹಜ಼್ರತ್ ಅಹ್ಮದ್‌ರವರ ಕುರಿತು ಭವಿಷ್ಯನುಡಿಗಳಿವೆ ಎಂದು ನಾವು ನಂಬುತ್ತೇವೆ.

ಲೇಖಕರು ಹಜ಼್ರತ್ ಮಿರ್ಜಾ಼ ಸಾಹೆಬರು ತನ್ನ ಪವಾಡಗಳನ್ನು ಮುಹಮ್ಮದ್ ಪೈಗಂಬರ್ (ಸ)ರ ಪವಾಡಕ್ಕಿಂತಲೂ ಶ್ರೇಷ್ಠವಾದುದೆಂದು ಹೇಳಿರುವರೆಂದು ಆಕ್ಷೇಪಿಸಿರುತ್ತಾರೆ. ಇದು ಸತ್ಯ ವಿರುದ್ಧವಾದ ಒಂದು ಪ್ರಸ್ತಾಪನೆಯಾಗಿದೆ. ಹಜ಼್ರತ್ ಅಹ್ಮದ್ (ಅ) ಒಂದೆಡೆ ಈರೀತಿ ಬರೆದಿದ್ದಾರೆ:

"ಮುಹಮ್ಮದ್ ಪೈಗಂಬರ್ (ಸ)ರ ಮುಖಾಂತರ ಪ್ರಕಟವಾದ ದಿವ್ಯ ದೃಷ್ಟಾಂತಗಳು ಇತರ ಎಲ್ಲಾ ಪ್ರವಾದಿಗಳ ಮುಖಾಂತರ ಪ್ರಕಟವಾದ ದೃಷ್ಟಾಂತಗಳಿಗಿಂತ ಶ್ರೇಷ್ಠವಾದುವೆಂದು ನಾನು ಪೂರ್ಣ ವಿಶ್ವಾಸದಿಂದ ಹೇಳಬಲ್ಲೆ .." (ಅಲ್ ಹಕಂ, 17-3-1901.)

ಅಹ್ಮದೀಯರ ಅನೇಕ ವಿಚಾರಗಳು ಇಸ್ಲಾಮಿಗೆ ವ್ಯತಿರಿಕ್ತವಾಗಿ ತೋರುವುವೆಂದು ಹೇಳುತ್ತಾ ಲೇಖಕರು ಮೂರು ವಿಷಯಗಳನ್ನು ಉದಾಹರಿಸಿದ್ದಾರೆ:

1. ''ಇವರ ವಾದದಂತೆ ಹಜ್ರತ್ ಈಸಾ ಮರಣಗೊಂಡು ಹೂಳಲ್ಪಟ್ಟರು ಮತ್ತು ಅವರು ಕಾಶ್ಮೀರಕ್ಕೆ ಬಂದು ಅಲ್ಲಿ ಬೈಬಲನ್ನು ಬೋಧಿಸಿ ಮರಣಗೊಂಡರು.''

ಹಜ಼್ರತ್ ಈಸಾ (ಅ) ಅವರು ಇತರ ಎಲ್ಲಾ ಪ್ರವಾದಿಗಳಂತೆ ಮೃತಪಟ್ಟಿರುವರೆಂದು ಅಹ್ಮದಿಯರಾದ ನಾವು ನಂಬುತ್ತೇವೆ. ಈಸಾ (ಅ) ರು ಮೃತರಾಗಿಲ್ಲವೆಂದೂ ಅವರು ಸ್ವರ್ಗದಿಂದ ಇಳಿದು ಬರುವರೆಂದೂ ಇರುವ ವಿಶ್ವಾಸಕ್ಕೆ ಆಧಾರವಾಗಿ ಪವಿತ್ರ ಖುರ್‌ಆನಿನ ಒಂದೇ ಒಂದು ವಚನವನ್ನು ಉದಾಹರಿಸಲು ಯಾರಿಂದಲೂ ಸಾಧ್ಯವಿಲ್ಲ. ಪ್ರವಾದಿ ಈಸಾ (ಅ) ರು ಶಿಲುಬಾ ಪ್ರಕರಣದ ನಂತರ ಪೆಲೆಸ್ತೀನಿನಿಂದ ತುರ್ಕಿ, ಅಫಘಾನಿಸ್ಥಾನ ಮಾರ್ಗವಾಗಿ ಕಾಶ್ಮೀರಕ್ಕೆ ಬಂದರೆಂದು ಚರಿತ್ರೆ ಘಟನೆಗಳು ವ್ಯಕ್ತಪಡಿಸಿವೆ.

2. ''ಮಹದಿ' ಅವತರಿಸಿ ಪ್ರತಿಯೊಬ್ಬನನ್ನೂ ಇಸ್ಲಾಂ ಧರ್ಮವನ್ನನುಸರಿಸುವಂತೆ ಕರೆಕೊಡುವರೆಂಬ ಇಸ್ಲಾಮಿನ ಈ ವಿಚಾರವನ್ನು ಇವರು ದೂರೀಕರಿಸಿ, ಹಜ್ರತ್ ಈಸಾ ಮತ್ತು ಹಜ್ರತ್ ಮುಹಮ್ಮದರ ಆತ್ಮಗಳು ಒಬ್ಬ ಮನುಷ್ಯನ ರೂಪದಲ್ಲಿ ಕಂಡುಬರುವುದಾಗಿಯೂ ಆ ಮನುಷ್ಯನೇ ಮಿರ್ಜಾ಼ ಅಹ್ಮದ್ ಎಂದೂ ಬೇರೆ ಮಹದಿ ಇಲ್ಲ ಎಂದೂ ಹೇಳಿದ್ದಾರೆ.''

ಜನಾಬ್ ಉಮರಬ್ಬನವರ ಮೇಲಿನ ಹೇಳಿಕೆಯು ಅಸ್ಪಷ್ಟವಾಗಿದೆ. ಇಮಾಂ ಮಹದಿ ಅವತರಿಸುವರೆಂದು ಅಹ್ಮದಿಯರು ನಂಬುತ್ತಾರೆ. ಅವರು ಇಸ್ಲಾಂ ಧರ್ಮವನ್ನು ಪ್ರಬೋಧಿಸುವರೆಂದು ನಾವು ನಂಬುತ್ತೇವೆ. ವಾಗ್ದಾನ ಮಾಡಲ್ಪಟ್ಟ ಆ ಇಮಾಂ ಮಹದಿಯೇ ಮಿರ್ಜಾ಼ ಗುಲಾಂ ಅಹ್ಮದರೆಂಬುದು ಅಹ್ಮದಿಯರ ವಿಶ್ವಾಸ. ವಾಗ್ದಾನ ಮಾಡಲ್ಪಟ್ಟ ಮಹದಿ ಮತ್ತು ಮಸೀಹ್ ವ್ಯತ್ಯಸ್ತ ವ್ಯಕ್ತಿಗಳಾಗಿರದೆ ಒಂದೇ ವ್ಯಕ್ತಿಯ ಎರಡು ಗುಣನಾಮಗಳಾಗಿವೆಯೆಂದು ಹದೀಸಿನಿಂದ ವ್ಯಕ್ತವಾಗುತ್ತದೆ. ''ಲಲ್ ಮಹದಿಯ್ಯ ಇಲ್ಲಾ ಈಸಾ'' ಅಂದರೆ "ಈಸಾ ಅಲ್ಲದೆ ಬೇರೆ ಮಹದಿ ಇಲ್ಲ'' ಎಂದು ಹಜ಼್ರತ್ ಮುಹಮ್ಮದ್ ಪೈಗಂಬರ್ (ಸ) ರು ಹೇಳಿರುವರು. (ಇಬ್ನು ಮಾಜಃ)

3. ''ಇವರು ಖುರಾನಿನ ಅರ್ಥವನ್ನು ಬದಲಾಯಿಸಿ ಇಸ್ಲಾಮಿನಲ್ಲಿ ಧರ್ಮಯುದ್ಧ (ಜಿಹಾದ್) ಇದೆ ಎಂದೂ ಅದು ಖಡ್ಗ ಮತ್ತು ಗುಂಡುಗಳಾಗಿರದೆ ಬೋಧನೆ ಮತ್ತು ಇಸ್ಲಾಮನ್ನು ಸ್ವೀಕರಿಸುವಂತೆ ಮಾಡುವುದಾಗಿಯೂ ಅದು ರಕ್ತಪಾತ, ಸಾವು ನೋವುಗಳಿಲ್ಲದ ಒಂದು ಶೀತಲ ಯುದ್ಧವೆಂಬುದಾಗಿ ಹೇಳಿರುವರು. ಜಿಹಾದ್ ಕುರಿತಾದ ಖುರಾನಿನ ಮಾತಿಗಳನ್ನು ಅಲ್ಲಗಳೆದಿರುವರು.''

ಇದರಿಂದ ತಿಳಿಯುವುದೇನೆಂದರೆ, ಜನಾಬ್ ಉಮರಬ್ಬನವರು 'ಜಿಹಾದ್''ನ ಕುರಿತು ಖುರಾನಿನ ಅಧ್ಯಾಪನೆಗಳನ್ನು ತೀರಾ ಗ್ರಹಿಸಿಲ್ಲವೆಂದಾಗಿದೆ. ಇಸ್ಲಾಂ ಧರ್ಮ ಪ್ರಚಾರಕ್ಕಾಗಿ ಖಡ್ಗ ಮತ್ತು ಗುಂಡುಗಳನ್ನು ಉಪಯೋಗಿಸಬೇಕೆಂದು ಉಮರಬ್ಬನವರು ತಿಳಿದಿರುವಂತೆ ತೋರುತ್ತದೆ. ಆದರೆ ಈ ವಿಚಾರವು ಪವಿತ್ರ ಖುರ್‌ಆನಿನ ಪ್ರಬೋಧನೆಗೆ ವಿರುದ್ಧವಾಗಿದೆ. ಮತಕಾರ್ಯದಲ್ಲಿ ಬಲಾತ್ಕಾರವನ್ನು ಪ್ರಯೋಗಿಸಲು ಇಸ್ಲಾಂ ಸಮ್ಮತಿಸುವುದಿಲ್ಲ. ಪವಿತ್ರ ಖುರ್‌ಆನ್ ಹೇಳುತ್ತದೆ: ''ಲಾ ಇಕ್‌ರಾಹ ಫಿದ್ದೀನ್'' ಅಂದರೆ ಧರ್ಮ ಕಾರ್ಯದಲ್ಲಿ ಬಲಾತ್ಕಾರವಿಲ್ಲ''. (ಪವಿತ್ರ ಖುರ್‌ಆನ್ 2:256).

ಇಸ್ಲಾಂ ಖಡ್ಗ ಬಲದಿಂದ ಪ್ರಚಾರಗೊಂಡ ಕಿರಾತ ಧರ್ಮವೆಂದು ಅದರ ಎದುರಾಳಿಗಳು ಆಕ್ಷೇಪಿಸುತ್ತಾ ಬಂದಿದ್ದಾರೆ. ಉಮರಬ್ಬನಂತಹ ವ್ಯಕ್ತಿಗಳ ಈ ತಪ್ಪಾದ ವಿಶ್ವಾಸವು ಎದುರಾಳಿಗಳ ಆಕ್ಷೇಪವನ್ನು ಬಲಪಡಿಸುತ್ತದೆ.

ಸಂಪೂರ್ಣವಾದ ಪರಿಶ್ರಮ ಎಂಬುದು 'ಜಿಹಾದ್' ಎಂಬ ಪದದ ಅರ್ಥವಾಗಿದೆ. ಆದುದರಿಂದ ಇಸ್ಲಾಮಿಗಾಗಿ–ಅದರ ಏಳಿಗೆಗೂ, ಪ್ರಚಾರಕ್ಕೂ ಸಂರಕ್ಷಣೆಗೂ–ಅತಿಯಾಗಿ ಪರಿಶ್ರಮಿಸುವುದೆಂಬುದೇ ಜಿಹಾದ್ ಆಗಿರುತ್ತದೆ. ಪವಿತ್ರ ಖುರ್‌ಆನಿನಿಂದ ವ್ಯಕ್ತವಾಗುವ ಈ ಜಿಹಾದಿನಲ್ಲಿ ಅಹ್ಮದಿಯರು ದೃಢವಿಶ್ವಾಸವುಳ್ಳವರಾಗಿದ್ದಾರೆ. ಇಸ್ಲಾಂ ಧರ್ಮವನ್ನು ಲೋಕದಾದ್ಯಂತ ಪ್ರಚಾರಪಡಿಸುತ್ತಾ ಅಹ್ಮದಿಯರು ಕಾರ್ಯರೂಪದಲ್ಲಿ ಜಿಹಾದ್ ಮಾಡುತ್ತಲಿದ್ದಾರೆ. ಅವರು ಪವಿತ್ರ ಖುರ್‌ಆನಿನ ಭಾಷಾಂತರವನ್ನು ಜಗತ್ತಿನ ಅನೇಕ ಭಾಷೆಗಳಲ್ಲಿ ಪ್ರಕಟಿಸಿರುವರು. ಮೊದಲೆಂದೂ ಮಸೀದಿ ಇಲ್ಲದ ವಿದೇಶ ರಾಜ್ಯಗಳಲ್ಲಿ ಮಸೀದಿಗಳನ್ನು ನಿರ್ಮಿಸುತ್ತಿದ್ದಾರೆ. ಅಹ್ಮದಿಯರ ಪರಿಶ್ರಮದ ಫಲವಾಗಿ ಯುರೋಪ್, ಅಮೇರಿಕ ಆಫ್ರಿಕ ಮೊದಲಾದ ಲೋಕದ ನಾನಾ ರಾಜ್ಯಗಳಿಂದ ಸಹಸ್ರಾರು ಮಂದಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆ.

ಕೊನೆಯದಾಗಿ ಉಮರಬ್ಬನವರು ಈ ರೀತಿ ಬರೆದಿರುವರು:

''ಖುರಾನಿನಲ್ಲಿ ಹೇಳಿದುದನ್ನು ಮತ್ತು ಹದೀಸು (ಹಜ್ರತ್ ಮುಹಮ್ಮದರ ವಚನ)ಗಳನ್ನು ಯಾವನೊಬ್ಬನು ನಂಬುವುದಿಲ್ಲವೋ ಅವನು ಅವಿಶ್ವಾಸಿ ಎನಿಸುವನು. 150 ಹದೀಸುಗಳಲ್ಲಿ ಹಜ್ರತ್ ಮುಹಮ್ಮದರು ಕೊನೆಯ ಪ್ರವಾದಿಗಳೆಂದು ಸಾರಲಾಗಿದೆ. ಅಲ್ಲದೆ ಹಜ್ರತ್ ಈಸಾರು ಸ್ವರ್ಗದಿಂದ ಇಳಿದುಬರುವರೆಂದೂ ಹೇಳಲಾಗಿದೆ. ಇವೆರಡನ್ನೂ ಈ ಪಂಥದವರು ಅಲ್ಲಗಳೆಯುವುದರಿಂದ ಇವರನ್ನು ಅವಿಶ್ವಾಸಿಗಳೆಂದು ಕರೆಯಬಹುದೆಂದು ಸುನ್ನತ್‌ವಲ್ ಜಮಾಅತ್ ಹೇಳುತ್ತದೆ.''

ಪವಿತ್ರ ಖುರ್‌ಆನಿನಲ್ಲೂ ಹದೀಸ್‌ಗಳಲ್ಲೂ ಅಹ್ಮದಿಯರು ಪೂರ್ಣವಾಗಿ ವಿಶ್ವಾಸವುಳ್ಳವರಾಗಿದ್ದಾರೆ. ಮುಹಮ್ಮದ್ ಪೈಗಂಬರರ ನಂತರ ಯಾವುದೇ ರೀತಿಯ ಪ್ರವಾದಿ ಬರಲಾರರೆಂದು ಪವಿತ್ರ ಖುರ್‌ಆನಿನಿಂದ ತಿಳಿದುಬರುವುದಿಲ್ಲ. ಬದಲಾಗಿ, ಆ ಪ್ರವಾದಿವರ್ಯರ ಅನುಸರಣೆಯ ಫಲವಾಗಿ ಶಿಷ್ಯ ಪ್ರವಾದಿಗಳು ಉಂಟಾಗುವರೆಂದು ಬೋಧ್ಯವಾಗುತ್ತದೆ. 150 ಹದೀಸುಗಳಲ್ಲಿ ಮುಹಮ್ಮದ್ ಪೈಗಂಬರರು ಕೊನೆಯ ಪ್ರವಾದಿಯೆಂದು ಹೇಳಲ್ಪಟ್ಟಿರುವುದಾಗಿ ಲೇಖಕರು ಹೇಳುತ್ತಾರೆ. ಆದರೆ, ಮುಹಮ್ಮದ್ ಪೈಗಂಬರರ ನಂತರ ಸಹ ಪ್ರವಾದಿಗಳು ಅವತರಿಸುವರೆಂದು ಹದೀಸುಗಳಿಂದಲೂ ತಿಳಿದುಬರುತ್ತದೆ. ಆದುದರಿಂದಲೇ ಮುಹಮ್ಮದ್ ಪೈಗಂಬರರ ಧರ್ಮಪತ್ನಿ ಹಜ್ರತ್ ಆಯಿಷಾರವರು ''ಖೂಲೂ ಖಾತಮುನ್ನಬಿಯ್ಯೀನ್ ವಲಾ ತಖೂಲೂ ಲಾ ನಬಿಯ್ಯ ಬಅದಹು" ಅಂದರೆ "ನೀವು (ಮುಹಮ್ಮದ್ ಪೈಗಂಬರರನ್ನು) ಖಾತಮುನ್ನಬಿಯ್ಯೀನ್ ಎಂದು ಹೇಳಿಕೊಳ್ಳಿರಿ; ಆದರೆ ಅವರ ನಂತರ ಪ್ರವಾದಿ ಇಲ್ಲವೆಂದು ಹೇಳಬೇಡಿರಿ'' ಎಂದು ನುಡಿದದ್ದು. (ದುರ್ರೆ ಮನ್ಸೂರ್, ತಕ್‌ಮಿಲ ಮಜ್‌ಮ ಅಲ್ ಬಿಹಾರ್).

150 ಹದೀಸುಗಳಲ್ಲಿ ಹಜ್ರತ್ ಮುಹಮ್ಮದರು ಕೊನೆಯ ಪ್ರವಾದಿಯೆಂದು ಸಾರಿರುವುದಾಗಿ ಒಂದೆಡೆ ಹೇಳುತ್ತಾ ಅದೇ ಶ್ವಾಸದಲ್ಲೇ ಈಸಾ (ಅ) ರು ಸ್ವರ್ಗದಿಂದ ಇಳಿದುಬರುವರೆಂದೂ ಉಮರಬ್ಬನವರು ಹೇಳಿರುವುದು ಪರಸ್ಪರ ಅನುಯೋಜ್ಯವಲ್ಲ.

''ಇವರನ್ನು ಅವಿಶ್ವಾಸಿಗಳೆಂದು ಕರೆಯಬಹುದೆಂದು ಸನ್ನತ್ ವಲ್ ಜಮಾಅತ್ ಹೇಳುತ್ತದೆ'' ಎಂದು ಬರೆದು ಉಮರಬ್ಬನವರು ತನ್ನ ಲೇಖನವನ್ನು ಮುಕ್ತಾಯಗೊಳಿಸಿದ್ದಾರೆ. ಅವರು ಅವಿಶ್ವಾಸಿಗಳೆಂದು ಹೇಳಿದುದರಿಂದ ಅಹ್ಮದಿಯರು ಅವಿಶ್ವಾಸಿಗಳಾಗುವುದಿಲ್ಲ. ಸುನ್ನತ್ ವಲ್ ಜಮಾಅತ್ ಪಂಥದವರನ್ನು ಇಸ್ಲಾಮಿನ ಇತರ ಪಂಥದವರು "ಕಾಫಿರ್'' ಎಂದು ವಿಧಿಸಿದ್ದಾರೆ. ಮುಸ್ಲಿಮರನ್ನು ಅವಿಶ್ವಾಸಿಗಳೆಂದು ಹೇಳುವುದು ಬಹಳ ಸುಲಭದ ಕೆಲಸ. ಆದರೆ, ಅವಿಶ್ವಾಸಿಗಳನ್ನು ಮುಸ್ಲಿಮರನ್ನಾಗಿ ಮಾಡುವುದು ಕಷ್ಟಸಾಧ್ಯ. ಅಹ್ಮದಿಯಾ ಜಮಾಅತ್ ಅವಿಶ್ವಾಸಿಗಳನ್ನು ಮುಸ್ಲಿಮರನ್ನಾಗಿ ಮಾಡುವುದರಲ್ಲಿ ಕಾರ್ಯಮಗ್ನವಾಗಿದೆ.

—೦—೦—೦—

# ಭಾರತಕ್ಕೆ ಕ್ರಿಸ್ತ ಬಂದಿದ್ದನೆ?

—ಸುರೇಂದ್ರ.

ಕ್ರಿಸ್ತನನ್ನು ಶಿಲುಬೆಗೇರಿಸಿದ ನಂತರ ಅವನು ಸಾಯಲಿಲ್ಲವೇ? ಶಿಲುಬೆಯಿಂದ ಅವನನ್ನು ಅವನ ಶಿಷ್ಯರು ಇಳಿಸಿದಾಗ ಇನ್ನೂ ಜೀವಂತವಾಗಿದ್ದನೇ? ಹೌದು, ಹಾಗೊಂದು ಸಿದ್ಧಾಂತವಿದೆ. ಅಷ್ಟೇ ಅಲ್ಲ, ಕ್ರಿಸ್ತ ಕಾಶ್ಮೀರಕ್ಕೆ ತಪ್ಪಿಸಿಕೊಂಡು ಬಂದು, ಅಲ್ಲಿ ಸಹಜ ಸಾವನ್ನಪ್ಪಿದನಂತೆ.

ಪೋಪ್ ಮತ್ತಿತರರು ಈ ಸಿದ್ಧಾಂತಕ್ಕೆ ಆಧಾರವಿಲ್ಲವೆಂದು ಹೇಳುತ್ತಾ ಬಂದಿರುವರಾದರೂ, ಯಾರೂ ಇದನ್ನು ಆಧಾರರಹಿತ ಎಂದು ಸಿದ್ಧಗೊಳಿಸಲು ಪ್ರಬಲವಾದ ಅಂಶ ಮಂಡಿಸಿಲ್ಲ.

## ನೆಹರೂ ನೋಟ

ಜವಾಹರಲಾಲ ನೆಹರೂ ಅವರು "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ" (ವಿಶ್ವ ಇತಿಹಾಸದಲ್ಲಿ ಇಣುಕು ನೋಟ) ಯಲ್ಲಿ ಏಸು ಅಥವಾ ಈಸಾ ಮಧ್ಯ ಏಷ್ಯಾದಾದ್ಯಂತ, ಕಾಶ್ಮೀರ, ಲಡಖ್ ಹಾಗೂ ಟಿಬೆಟ್ ಮತ್ತು ಇನ್ನೂ ಉತ್ತರದಲ್ಲಿ ಸಂಚರಿಸಿರುವನೆಂಬ ಬಲವಾದ ನಂಬಿಕೆಯಿದೆ. ಅವನು ಹೀಗೆ ಸಂಚರಿಸಿದ್ದರೆ ಅದೇನೂ ಆಶ್ಚರ್ಯವಿಲ್ಲ" ಎಂದಿದ್ದಾರೆ.

ಇಸ್ಲಾಮಿನ ಅಹ್ಮದಿಯ ಚಳವಳಿಯ ಆದ್ಯ ಪ್ರವರ್ತಕ ಮಿರ್ಜಾ ಗುಲಾಂ ಅಹ್ಮದ್ 1889ರಲ್ಲಿ ಕ್ರಿಸ್ತನನ್ನು ಕಾಶ್ಮೀರದಲ್ಲಿ ಸಮಾಧಿ ಮಾಡಲಾಯಿತು ಎಂದು ಹೇಳಿದ್ದಾರೆ.

## ಬೈಬಲಿನ ಸಾಕ್ಷ್ಯಗಳು

ಮೌಲಾನ ಮಹಮಂದ್‌ಅಲೀ ಅವರು ಕುರಾನನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಇವರು ಇದರ ಮುನ್ನುಡಿಯಲ್ಲಿ ಬೈಬಲ್ಲಿನ ಕೆಲವು ಅಂಶಗಳತ್ತ ಗಮನ ಸೆಳೆದಿದ್ದಾರೆ.

ಇವು ಹೀಗಿವೆ: (1) ಕ್ರಿಸ್ತ ಶಿಲುಬೆಯನ್ನೇರಿದ್ದದ್ದು ಕೇವಲ ಕೆಲವೇ ಗಂಟೆಗಳು. ಅಷ್ಟು ಬೇಗ ಯಾರೂ ಸಾಯುವುದಿಲ್ಲ. (2) ಕ್ರಿಸ್ತನನ್ನು ಶಿಲುಬೆಯಿಂದ ಇಳಿಸಿದ ಬಳಿಕ ಸೈನಿಕರಲೊಬ್ಬ ತನ್ನ ಈಟಿಯಿಂದ ಕ್ರಿಸ್ತನ ದೇಹದ ಪಕ್ಕೆಯನ್ನು ತಿವಿದ, ರಕ್ತ ಬಂದಿತು. ಆದ್ದರಿಂದ ಕ್ರಿಸ್ತ ಬದುಕಿದ್ದನೆಂದು ಅರ್ಥ. (3) ಸತ್ತಿರುವನೆಂದು ತಿಳಿದು ದೇಹವನ್ನು ಶಿಷ್ಯರಿಗೆ ಕೊಡಲಾಯಿತು. ಶಿಷ್ಯರು ಆತನನ್ನು ಉಪಚರಿಸಿ ಗುಹೆಯೊಂದರಲ್ಲಿ ಅವಿತಿಟ್ಟರು. (4) ಮೂರನೇ ದಿನ ಗುಹೆಯ ಮುಂದಿದ್ದ ಬಂಡೆಯನ್ನು ತೆಗೆಯಲಾಗಿದೆ. ತನ್ನ ಅಮಾನುಷ ಶಕ್ತಿಯಿಂದ ಕ್ರಿಸ್ತ ಹೊರಬರಲು ಸಾಧ್ಯವಿದ್ದಿದ್ದರೆ ಬಂಡೆಯನ್ನು ಸರಿಸುವ ಅಗತ್ಯವೇನಿತ್ತು? (5) ಮೇರಿ ಕ್ರಿಸ್ತನನ್ನು ನೋಡಿದಾಗ ಆತ ತೋಟದ ಮಾಲಿಯೆಂದು ಭಾವಿಸಿದಳು. ಅಂದರೆ, ಕ್ರಿಸ್ತ ಮಾಲಿಯ ಉಡುಪು ಧರಿಸಿದ್ದ. (6) ಕ್ರಿಸ್ತನ ಶಿಷ್ಯರು ಆತನನ್ನು ಕೊನೆಯ ಬಾರಿ ಕಂಡಿದ್ದು ಶಿಲುಬೆಗೆ ಏರಿಸಿದ್ದ ಸ್ಥಿತಿಯಲ್ಲಿ. ಗಾಯಗಳು ಕೈ ಹೋಗುವಷ್ಟು ಆಳವಾಗಿದ್ದವು. ಆನಂತರ ಆತನ ಬಗ್ಗೆ ಏನೂ ತಿಳಿದುಬರಲಿಲ್ಲ. (7) ಕ್ರಿಸ್ತನಿಗೆ ಹಸಿವಾಗಿತ್ತು ಆತ ಆಹಾರ ಸೇವಿಸಿದ. (8) ಆನಂತರ ಕ್ರಿಸ್ತ ತನ್ನ ಪರಮಾಪ್ತ ಶಿಷ್ಯರಿಬ್ಬರ ಜತೆ ಗೆಲಿಲಿಗೆ ಹೊರಟ.

## ಮಸ್ಲಿನ್ ಬಟ್ಟೆ–ಮುಲಾಮು

ಶಿಲುಬೆಯಿಂದ ಕ್ರಿಸ್ತನನ್ನು ಆತನ ಶಿಷ್ಯರಾದ ಜೋಸೆಫ್ ಮತ್ತು ನಿಕೋಡೆಮಸ್ ಕೆಳಗಿಳಿಸಿದ ನಂತರ ಆತನ ಗಾಯಗಳಿಗೆ ಮುಲಾಮು ಹಚ್ಚಿ ನವಿರಾದ ಮಸ್ಲಿನ್ ಬಟ್ಟೆಯಿಂದ ಮುಚ್ಚಲಾಯಿತು. ಇಂದಿಗೂ "ಏಸುವಿನ ಮುಲಾಮು" ಪ್ರಚಲಿತದಲ್ಲಿದೆ. ಇಟಲಿಯ ಟ್ಯೂರಿನ್ನಿನ ಸಣ್ಣ ಕ್ರೈಸ್ತಾಲಯವೊಂದರಲ್ಲಿ ಹದಿಮೂರು ಅಡಿ ಉದ್ದ ಮತ್ತು ಮೂರುವರೆ ಅಡಿ ಅಗಲದ ಮಸ್ಲಿನ್ ಬಟ್ಟೆಯನ್ನು ರಕ್ಷಿಸಿಡಲಾಗಿದೆ.

ಫ್ರಾನ್ಸಿನ ಖ್ಯಾತ ವೈದ್ಯ ಡಾ॥ ಯೂವೆಸ್ ಡೆಲಗಿ ಅವರು ನಡೆಸಿರುವ ಪರೀಕ್ಷೆ ಮೊದಲ ದೊಡ್ಡ ಪರೀಕ್ಷೆ.

ಶವವಸ್ತ್ರದ ಮೇಲಿರುವ ಕಲೆಗಳು ಬೆವರು ಮತ್ತು ಖಾದ್ಯಗಳಿಂದ ಆಗಿವೆ. ಇವುಗಳ ವಾಸನೆಯನ್ನು ಶವವಸ್ತ್ರ

ಪಡೆದಿದೆ. ಎದೆ ಮತ್ತು ಹೊಟ್ಟೆಯ ಭಾಗಗಳಲ್ಲಿ ಈ ಕಲೆಗಳು ವಿಪರೀತ. ತೋಳುಗಳಲ್ಲಿನ ಗಾಯಗಳು ಭಾರವಾದ ವಸ್ತುವನ್ನು ಹೊತ್ತಂತೆ ಆಗಿವೆ. ದೇಹವನ್ನು ಲೋಳೆರಸದ ಪುಡಿಯಿಂದ ಚುಮುಕಿಸಲಾಗಿದೆ ಎಂಬುದು ಅವರು ಹೇಳಿದ ಅಂಶಗಳು.

ಫ್ರಾನ್ಸಿನ ಖ್ಯಾತ ಲೇಖಕ ಜಾನ್ ರ‍್ಯೂಬೆನ್ ಕೂಡ ಶವವಸ್ತ್ರದ ದೀರ್ಘ ಅಧ್ಯಯನ ನಡೆಸಿ, ಶವ ವಸ್ತ್ರವು ಕ್ರಿಸ್ತನ ಮೇಲೆ ಹೊದಿಸಿದ ಶವವಸ್ತ್ರವೆಂದೇ ಹೇಳುವುದಾದರೆ, ಶಿಲುಬೆಯಿಂದ ಇಳಿಸಿದ ನಂತರವೂ ಆತನ ಹೃದಯದ ಮಿಡಿತ ನಿಂತಿರಲಿಲ್ಲವೆಂಬುದು ರಕ್ತದ ಕಲೆಗಳಿಂದ ವೇದ್ಯ ಎಂದಿದ್ದಾರೆ. ಶಿಲುಬೆಯಿಂದ ಕ್ರಿಸ್ತನಿಗೆ ಮೃತ್ಯುಬಂದಿಲ್ಲವೆಂಬುದು ಅವರ ಅಭಿಪ್ರಾಯ.

## ಭಾರತದಿಂದ

ಕ್ರಿಸ್ತ ಭಾರತದಿಂದ ಜೆರೂಸಲೆಮಿಗೆ ಬಂದನೆಂಬ ಸಿದ್ಧಾಂತವನ್ನು ಮೊಟ್ಟಮೊದಲಿಗೆ ಪ್ರಬಲವಾಗಿ ಸಮರ್ಥಿಸಿದವನೆಂದರೆ ರಷ್ಯದ ಯಾತ್ರಿಕ ಸಂಶೋಧಕ ನಿಕೋಲಸ್ ನೋಟೊವಿಚ್. 'ಏಸುಕ್ರಿಸ್ತನ ಅಗೋಚರ ಜೀವನ' ಎಂಬ ಪುಸ್ತಕದಲ್ಲಿ ಈತ ತಾನು ಬುದ್ಧ ವಿಹಾರ ಗಳಿಗೆ ಭೇಟಿ ಕೊಟ್ಟಿದ್ದಾಗ ಕ್ರಿಸ್ತನ ಜೀವನ ಮತ್ತು ಪಶ್ಚಿಮ ರಾಷ್ಟ್ರಗಳ ಗತಕಾಲದ ಗುರುತುಗಳು ಇನ್ನೂ ಇವೆಯೆಂದು ಮುಖ್ಯ ಲಾಮಾ ತಿಳಿಸಿದರೆಂದು ಹೇಳಿದ್ದಾನೆ. ಬೌದ್ಧ ಗ್ರಂಥಗಳಲ್ಲಿ ಏಸು, ಆತನ ಉಪದೇಶ ಮತ್ತು ಲಡಾಖಿಗೆ ಆತ ಭೇಟಿ ಕೊಟ್ಟ ಪ್ರಸ್ತಾಪಗಳು ಹೇರಳವಾಗಿರುವುದು ನೋಟೊವಿಚ್‌ಗೆ ಕಂಡುಬಂದಿದೆ.

## ಶ್ರೀನಗರದಲ್ಲಿ ಸಮಾಧಿ

'ಶ್ರೀನಗರದಲ್ಲಿ ಕ್ರಿಸ್ತ ಸತ್ತನೆಂದು ಅನೇಕರು ನನಗೆ ತಿಳಿಸಿದರು' ಎಂದು ಖ್ಯಾತ ಪ್ರಾಚ್ಯ ಸಂಶೋಧಕ ಪ್ರೊ|| ರೋರಿಚ್ ಹೇಳಿದ್ದಾರೆ. ಕ್ರಿಸ್ತನಿಗೆ ಸಂಬಂಧಿಸಿದ ಅನೇಕ ಘಟನೆಗಳನ್ನು ಲೆಹ್‌ನಲ್ಲಿ ತಮಗೆ ತಿಳಿಸಲಾಯಿತೆಂದು ಅವರು ತಿಳಿಸಿದ್ದಾರೆ. ಮಾರುಕಟ್ಟೆಯಲ್ಲಿ ಕೊಳವೊಂದನ್ನು ನನಗೆ ತೋರಿಸಲಾಯಿತು. ಕ್ರಿಸ್ತ ಅಲ್ಲಿ ಉಪದೇಶ ನೀಡಿದನಂತೆ. ಲಡಾಖ್, ಸಿಂಕಿಯಾಂಗ್, ಮಂಗೋಲಿಯಾ ಮುಂತಾದ ಕಡೆಗಳಲ್ಲೂ ವಿವಿಧ ಕಥೆಗಳನ್ನು ಕೇಳಿದೆ. ಇವೆಲ್ಲಾ ಕ್ರಿಸ್ತ ಪ್ಯಾಲಿಸ್ಟೀನಿನಿಂದ ಭಾರತ ಮತ್ತು ಏಷ್ಯಗಳಿಗೆ ಬಂದಿದ್ದನೆಂಬುದನ್ನು ಸಮರ್ಥಿಸುತ್ತವೆ ಎಂದು ಹೇಳಿದ್ದಾರೆ.

## ಯಹೂದಿ ಶೈಲಿ

ಶ್ರೀನಗರದಲ್ಲಿ ಯಹೂದಿ ಶೈಲಿಯಲ್ಲಿ ಕಟ್ಟಲಾದ ಗೋರಿಯೊಂದಿದೆ. ಏಳು ಅಡಿ ಉದ್ದ ಎರಡಡಿ ಅಗಲದ ಈ ಗೋರಿಯ ಮೇಲೆ ಹೀಬ್ರೂ ಭಾಷೆಯಲ್ಲಿ ಬರೆದ ಶಾಸನವಿದೆ. ಪಾಲೀಮಾರ್ ಉದ್ಯಾನವನಗಳ ಬಳಿಯ ಇಸ್ಬಾರಿನಲ್ಲಿ ಕ್ರಿಸ್ತ ಕೆಲವು ಕಾಲ ಇದ್ದನೆಂದು ಹೇಳಲಾಗಿದೆ. ಮೊಗಲರ ಆಡಳಿತ ಕಾಲದಲ್ಲಿ ಈ ಗೋರಿಯನ್ನು ನೋಡಿಕೊಳ್ಳಲು ಸ್ಥಳೀಯ ಮುಸ್ಲಿಮನನ್ನು ನೇಮಿಸಲಾಯಿತು. 'ಯೂಸ ಅಸಫ್' ಗುರುವಿನ ಗೋರಿ ಇದೆಂದು ಹೇಳಲಾಗಿದೆ.

ಈ ಪ್ರಸ್ತಾಪವನ್ನು 16ನೇ ಶತಮಾನದಲ್ಲಿ ಬರೆದ ಮೀರಾಬಾಯಿಯ ಮ್ಯಾಗ್ಡಲೀನ್ ದಿ ಸಿನರ್ ಎಂಬ ಕಾವ್ಯದಲ್ಲಿ ಕಾಣುತ್ತೇವೆ. ಭಾರತಕ್ಕೆ 17ನೇ ಶತಮಾನದಲ್ಲಿ ಬಂದಿದ್ದ ಖ್ಯಾತ ಫ್ರೆಂಚ್ ಇತಿಹಾಸಕಾರ ಬೆರ್ನಿಯರ್, "ಪಿರಪಿಂಜಲೆ ಬೆಟ್ಟಗಳನ್ನು ದಾಟಿ ಕಾಶ್ಮೀರ ಗಡಿಯನ್ನು ಪ್ರವೇಶಿಸಿದಾಗ ಗಡಿ ಗ್ರಾಮದ ಜನರಲ್ಲಿ ಏಸುವಿನ ಹೋಲಿಕೆಯನ್ನು ಕಂಡೆ. ನಾನು ತಮಾಷೆಗೆ ಹೇಳುತ್ತಿರುವನೆಂದು ಭಾವಿಸಬೇಡಿ. ನಾನು ಬರುವುದಕ್ಕೆ ಮುಂಚೆ ಬಂದಿದ್ದ ಪಾದ್ರಿ ಹಾಗೂ ಅನೇಕ ಯುರೋಪಿಯನ್ನರು ಇದೇ ಮಾತನ್ನು ಹೇಳಿಹರು" ಎಂದು ಬರೆದಿದ್ದಾರೆ.

## ಈಗಲೂ–

1929ರಲ್ಲಿ ಡಾಕ್ಟರ್ ಸ್ಪೆನ್ಸರ್ ತಮ್ಮ 'ದಿ ಮಿಸ್ಟಿಕಲ್ ಲೈಫ್ ಆಫ್ ಜೀಸಸ್' ಎಂಬ ಪುಸ್ತಕದಲ್ಲಿ ಏಸು ಶಿಲುಬೆಯ ಮೇಲೆ ಖಂಡಿತ ಸತ್ತಿಲ್ಲವೆಂದು ಹೇಳಿದ್ದಾರೆ. ಹಾಗೆ ಆತ ಸತ್ತಿಲ್ಲದೇ ಹೋಗಿದ್ದರೆ, ಆತನನ್ನು ಕೆಳಗಿಳಿಸಿದ ಮೇಲೆ ಏನಾಯಿತು, ಮುಂದೇನಾಯಿತು? ಅದರ ಪ್ರಸ್ತಾಪವೇ ಇಲ್ಲ. ಇವೆಲ್ಲ ಕ್ರಿಸ್ತ ಭಾರತಕ್ಕೆ ಬಂದಿದ್ದನೆಂಬುದನ್ನು ಸಮರ್ಥಿಸುತ್ತವೆ.

(ಕೃಪೆ: ಪ್ರಜಾವಾಣಿ 25–12–1976.)

# ಮಧುರೆಯಲ್ಲಿ ಲೋಕಮತ ಮಹಾ ಸಮ್ಮೇಳನ

ತಮಿಳುನಾಡಿನ ಮುಖ್ಯ ನಗರವೂ The Temple City of India ಎಂದು ಕರೆಯಲ್ಪಡುವ ಹಿಂದುಗಳ ತೀರ್ಥಕ್ಷೇತ್ರವೂ ಆಗಿರುವ ಮಧುರೆಯಲ್ಲಿ ಮಾರ್ಚ್ 30ರಿಂದ ಎಪ್ರಿಲ್ 5ರ ವರೆಗೆ ಜರಗಿದ ಜಾಗತಿಕ ಮತ-ತತ್ವಜ್ಞಾನ-ಸಾಂಸ್ಕೃತಿಕ ಸಮ್ಮೇಳನದಲ್ಲಿ (World Conference on Religion, Philosophy and Culture) ಇಸ್ಲಾಮನ್ನು ಪ್ರತಿನಿಧೀಕರಿಸಲು ದೈವಾನುಗ್ರಹದಿಂದ ಅಹ್ಮದಿಯಾ ಸಂಘಟನೆಗೆ ಸೌಭಾಗ್ಯ ಲಭಿಸಿತು.

ಈ ರೀತಿಯ ಸಮ್ಮೇಳನ ಪ್ರಥಮವಾಗಿ 84 ವರ್ಷಗಳ ಮೊದಲು ಸ್ವಾಮಿ ವಿವೇಕಾನಂದರ ಸಮಕ್ಷಮದಲ್ಲಿ ಚಿಕಾಗೋ ನಗರದಲ್ಲೂ ಎರಡನೆಯದಾಗಿ 1963ನೇ ಇಸವಿಯಲ್ಲಿ ಕಲ್ಕತ್ತದಲ್ಲೂ ಅನಂತರ ಮೂರನೆಯ ಬಾರಿ ಇದೀಗ ಮಧುರೆಯಲ್ಲಿ ನಡೆಯಿತ್ತೆಂದೂ ಹೇಳಲಾಗಿದೆ.

ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾರತದ ವಿವಿಧ ಸಂಸ್ಥಾನಗಳಿಂದ ಯುನಿವರ್ಸಿಟಿ ತತ್ವಶಾಸ್ತ್ರ ಪ್ರೊಫೆಸರರೂ ವಿವಿಧ ಮತ ಪ್ರತಿನಿಧಿಗಳೂ ನೂರುಗಟ್ಟಲೆಯಲ್ಲಿ ಭಾಗವಹಿಸಿದ್ದರು. ಅಲ್ಲದೆ, ಯುಗೋಸ್ಲಾವಿಯಾ ಅಮೇರಿಕ, ಹಾಂಗ್‌ಕಾಂಗ್, ಸಿಂಗಾಪೂರ್, ತೈಲೇಂಡ ಕೌಲಾಲಂಪುರ್, ಮಲೇಶ್ಯಾ, ನೈಜೀರಿಯಾ, ಜರ್ಮನಿ, ಲೆಬನಾನ್, ಜಪಾನ್, ಶ್ರೀಲಂಕಾ, ನೇಪಾಲ, ಟಿಬೇಟ್, ಇಂಡೋನೇಶ್ಯಾ, ಸ್ವಿಜರ್ಲೆಂಡ್ ಮೊದಲಾದೆಡೆಗಳಿಂದ ಪ್ರಶಸ್ತ ವ್ಯಕ್ತಿಗಳು ಪ್ರತಿನಿಧಿಗಳಾಗಿ ಬಂದಿದ್ದರು.

## ಅಹ್ಮದಿಯಾ ಸಂಘಟನೆಗೆ ಆಮಂತ್ರಣ

ಸಮ್ಮೇಳನದ ಸಂಘಟಕರ ಆಮಂತ್ರಣದ ಮೇರೆಗೆ ಪ್ರಸ್ತುತ ಲೋಕಮತ ಸಮ್ಮೇಳನದಲ್ಲಿ ತಮಿಳುನಾಡಿನ ಅಹ್ಮದಿಯಾ ಪ್ರಧಾನ ಪ್ರಚಾರಕರಾದ ಮೌಲವಿ ಮುಹಮ್ಮದ್ ಉಮರ್ ಸಾಹೆಬ್ H, A. ಅವರ ನೇತೃತ್ವದಲ್ಲಿ ಮುಹಮ್ಮದ್ ಕರೀಮುಲ್ಲಾ ನೌಜವಾನ್, ಡಾ। ಹಾಫಿಜ್ ಸಾಲಿಹ್ ಮುಹಮ್ಮದ್ ಅಲಾದ್ದೀನ್ MSc PhD. ಎಂಬಿವರು ಸಮ್ಮೇಳನದಲ್ಲಿ ಪಾಲುಗೊಂಡರು.

## ಉದ್ಘಾಟನೆ

ತಮಿಳುನಾಡಿನ ರಾಜ್ಯಪಾಲರ ಉಪದೇಶಕ (Adviser) ರಾದ ಶ್ರೀ ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಮಾರ್ಚ್ 30ರಂದು ನೇಪಾಲಿನ ರಾಜ ವೀರೇಂದ್ರ ವೀರವಿಕ್ರಮ ಅವರು ಸಮ್ಮೇಳನವನ್ನು ಉದ್ಘಾಟನೆ ಮಾಡಿದರು. ಆ ಸಂದರ್ಭದಲ್ಲಿ ಶ್ರೀ ಶಂಕರಾಚಾರ್ಯ ಜಗದ್ಗುರು ಜಯೇಂದ್ರ ಸರಸ್ವತಿ ಸ್ವಾಮಿ ಭಾಷಣ ಮಾಡಿದರು. ಅನಂತರ ಪ್ರತಿನಿಧಿಗಳನ್ನು ಪರಿಚಯ ಪಡಿಸಲಾಯಿತು. ಉದ್ಘಾಟನಾ ಸಮ್ಮೇಳನದಲ್ಲಿ 15.000 ಮಂದಿ ಭಾಗವಹಿಸಿದ್ದರು. ಪ್ರಸ್ತುತ ಮಹಾ ಸಮ್ಮೇಳನದಲ್ಲಿ ಇಸ್ಲಾಮನ್ನು ಪ್ರತಿನಿಧೀಕರಿಸಿ ಮಾತನಾಡಲು ಅಹ್ಮದಿಯರು ಮಾತ್ರವೇ ಆಗಮಿಸಿದ್ದರು.

## ಸೆಮಿನಾರ್ ಮತ್ತು ಸಭೆಗಳು

ಏಳು ದಿನಗಳ ಕಾಲ ನಡೆದ ಈ ಸಮ್ಮೇಳನದಲ್ಲಿ ಪ್ರತಿದಿನ ಬೆಳಿಗ್ಗೆ 9ಗಂಟೆಯಿಂದ 12ರ ವರೆಗೆ ಸೆಮಿನಾರ್ ಮತ್ತು ಸಂಜೆ ಸಾರ್ವಜನಿಕ ಸಭೆಗಳು ಜರಗುತ್ತಲಿದ್ದವು. ಮಾರ್ಚ್ 31ರಂದು ಮತ್ತು ಎಪ್ರಿಲ್ 2ರಂದು ನಡೆದ ಸೆಮಿನಾರಿನಲ್ಲಿ ಜನಾಬ್ ಕರೀಮುಲ್ಲಾ ಸಾಹೆಬ್ ಮತ್ತು ಡಾ। ಹಾಫಿಜ್ ಸಾಲಿಹ್ ಮುಹಮ್ಮದ್ ಸಾಹೆಬ್ ಇಂಗ್ಲೀಷಿನಲ್ಲೂ ಎಪ್ರಿಲ್ 5ರಂದು ನಡೆದ ಸಮಾರೋಪ ಸಮ್ಮೇಳನದಲ್ಲಿ ಮೌಲವಿ ಮುಹಮ್ಮದ್ ಉಮರ್ ಸಾಹೆಬ್ ತಮಿಳಿನಲ್ಲೂ ಭಾಷಣಮಾಡಿದರು. ಈ ಮೂರು ಭಾಷಣಗಳಿಗೂ ಶ್ರೋತೃಗಳಿಂದ ಉತ್ತಮ ಪ್ರತಿಕ್ರಿಯೆ ಲಭಿಸಿತಲ್ಲದೆ, ಆಲ್ ಇಂಡಿಯಾ ರೇಡಿಯೋ ಮತ್ತು 'ಇಂಡಿಯನ್ ಎಕ್ಸ್‌ಪ್ರೆಸ್', 'ದಿನಮಣಿ' ಮೊದಲಾದ ವೃತ್ತಪತ್ರಿಕೆಗಳು ಪ್ರಸ್ತುತ ಭಾಷಣಗಳನ್ನು ಪರಾಮರ್ಶಿಸಿದುವು.

## ಲಘುಲೇಖನ ವಿತರಣೆ

ಇಷ್ಟರೊಳಗೆ ಸಮ್ಮೇಳನ ನಗರದಲ್ಲಿ ಅಹ್ಮದಿಯಾ

ಸಂಘಟನೆಯು ಒಂದು ಚರ್ಚಾ ವಿಷಯವಾಗಿತ್ತು. ಭಾರತದ ಒಳಗಿನ ಮತ್ತು ಹೊರಗಿನ ಪ್ರತಿನಿಧಿಗಳಿಗೆ ವಿತರಣೆ ಮಾಡಿದ ಅಹ್ಮದಿಯಾ ಸಾಹಿತ್ಯಗಳನ್ನು ಅವರು ಕೌತುಕದಿಂದ ಪಡೆದು ಓದುತ್ತಿದ್ದರು. ಸಮ್ಮೇಳನದ ಪ್ರತಿನಿಧಿಗಳಿಗೂ ಸಾರ್ವಜನಿಕರಿಗೂ ವಿಪುಲವಾಗಿ ಅಹ್ಮದಿಯಾ ಲಘು ಲೇಖನಗಳನ್ನೂ ಪುಸ್ತಕಗಳನ್ನೂ ವಿತರಣೆ ಮಾಡಲಾಯಿತು.

**ಶ್ರೀ ಶಂಕರಾಚಾರ್ಯ ಸ್ವಾಮಿಯವರೊಡನೆ ಸಂಭಾಷಣೆ**

ಶ್ರೀ ಕಾಂಚಿಕಾಮಕೋಟಿ ಪೀಠದ ಶ್ರೀ ಶಂಕರಾಚಾರ್ಯ ಸ್ವಾಮಿಯವರಿಗೆ ಹಿಂದುಗಳೆಡೆಯಲ್ಲಿ ಅತ್ಯಂತ ಆದರಣೀಯವಾದ ಒಂದು ಸ್ಥಾನವಿದೆ. ಅಹ್ಮದಿಯಾ ಪ್ರತಿನಿಧಿ ಸಂಘ ಅಪೇಕ್ಷೆಪಟ್ಟ ಪ್ರಕಾರ ಶ್ರೀ ಸ್ವಾಮಿಯವರು ಎಪ್ರಿಲ್ 2ರಂದು ಬೆಳಿಗ್ಗೆ 10 ನಿಮಿಷ ಕಾಲ ಸಂಭಾಷಣೆ ಮಾಡಲು ಒಪ್ಪಿದರು. ಮೌಲವಿ ಮುಹಮ್ಮದ್ ಉಮರ್ ಸಾಹೆಬರು ಪ್ರಥಮವಾಗಿ ಸ್ವಾಮಿಯವರಿಗೆ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರವನ್ನೂ ಇಸ್ಲಾಂ ಮತ ತತ್ವಜ್ಞಾನ, ಪೈಗಂಬರರ ಚರಿತ್ರೆ ಎಂಬೀ ಇಂಗ್ಲಿಷ್ ಕೃತಿಗಳನ್ನೂ ಪಾರಿತೋಷಕವಾಗಿ ಸಮರ್ಪಿಸಿದರು. ಶಂಕರಾಚಾರ್ಯ ಸ್ವಾಮಿಯವರು ಅದನ್ನು ಆದರದಿಂದ ಸ್ವೀಕರಿಸಿದರು. ಅಹ್ಮದಿಯಾ ವಿಶ್ವಾಸಗಳು, ಅಹ್ಮದಿಯರಿಗೂ ಅಹ್ಮದಿಯೇತರ ಮುಸ್ಲಿಮರಿಗೂ ಇರುವ ವ್ಯತ್ಯಾಸ, ಸ್ವರ್ಗ ನರಕಗಳ ಯಥಾರ್ಥತೆ ಪುನರ್ಜನ್ಮವಾದ ಮೊದಲಾದ ವಿಷಯಗಳ ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಬರೇ 10ನಿಮಿಷಗಳ ಸಮಯ ಕೊಟ್ಟಿದ್ದರೂ ನಂತರ ಸ್ವಾಮಿಯವರ ಇಚ್ಛೆಪ್ರಕಾರ ಒಂದೂಕಾಲು ಗಂಟೆ ಕಾಲ ಸಂಭಾಷಣೆ ಮುಂದುವರಿಯಿತು. ಈ ಸಂಭಾಷಣೆಯಿಂದ ಸ್ವಾಮಿಯವರಿಗೆ ಇಸ್ಲಾಮಿನ ಬಗ್ಗೆ ಇದ್ದ ಹಲವಾರು ತಪ್ಪು ಕಲ್ಪನೆಗಳು ನಿವಾರಿಸಲ್ಪಟ್ಟವು. ಸ್ವಾಮಿಜಿಯವರಿಂದ ಬೀಳ್ಕೊಳ್ಳುವಾಗ ಅವರು ಬಹುಮಾನ ಸೂಚಕವಾಗಿ ಅಹ್ಮದಿ ಪ್ರತಿನಿಧಿಗಳಿಗೆ ತಾನು ಹಿಂದು ಮತದ ಕುರಿತು ಇಂಗ್ಲಿಷಿನಲ್ಲಿ ಬರೆದ ಗ್ರಂಥದ ಒಂದೊಂದು ಪ್ರತಿಯನ್ನು ನೀಡಿದರು.

**ತಿರುವರುಲ್ ತಪಯೋಗಿ**

ಸಮ್ಮೇಳನದಲ್ಲಿ ಭಾಗವಹಿಸಿದ ಹಿಂದುಗಳ ಇನ್ನೋರ್ವ ಆದರಣೀಯ ಗುರುವಾದ 'ತಿರುವರುಳ್ ತಪಯೋಗಿ'ಯವರೊಡನೆ ಸಹ ಸಂಭಾಷಣೆ ನಡೆಸಲು ಅಹ್ಮದಿಯಾ ಪ್ರತಿನಿಧಿಗಳಿಗೆ ಸಂದರ್ಭ ಲಭಿಸಿತು. 'ಮಧುರೈ ಆಧೀನ'ದ 291ನೇ ಮಹದ್ಗುರುವಾದ ಇವರನ್ನು ಸಂದರ್ಶಿಸಿ 'ಇಸ್ಲಾಂ ಮತ ತತ್ವಜ್ಞಾನ'ದ ಇಂಗ್ಲಿಷ್ ಪ್ರತಿಯನ್ನೂ ಇನ್ನಿತರ ಪುಸ್ತಕಗಳನ್ನೂ ಅರ್ಪಿಸಲಾಯಿತು. ಸಂಭಾಷಣೆಯ ಮಧ್ಯೆ ತನ್ನೊಡನೆ ಪ್ರಸ್ತುತ ಗ್ರಂಥದ ತಮಿಳು ಭಾಷಾಂತರ ಇದೆಯೆಂದೂ ಅದರ ಕೆಲವು ಉದ್ಧಾರಣೆಗಳನ್ನು "ಮರಣಾನಂತರ ಜೀವಿತ'' ಎಂಬ ತನ್ನ ಗ್ರಂಥದಲ್ಲಿ ಸೇರಿಸಿರುವೆನೆಂದೂ ಅವರು ಹೇಳಿದರು.

**ಸಂಭಾಷಣೆಗಳೂ ಚರ್ಚೆಗಳೂ**

ಭಾರತದ ಒಳಗಿನ ಮತ್ತು ಹೊರಗಿನ ಸಾವಿರ ಗಟ್ಟಲೆ ಪ್ರತಿನಿಧಿಗಳೊಡನೆ ಪರಿಚಯಗೊಳ್ಳಲಿಕ್ಕೂ ಇಸ್ಲಾಂ ಮತ ತತ್ವವನ್ನು ಪ್ರಬೋಧಿಸಲಿಕ್ಕೂ ಒಂದು ಅಪೂರ್ವ ಸಂದರ್ಭವು ಅಹ್ಮದಿಯಾ ಪ್ರತಿನಿಧಿಗಳಿಗೆ ಲಭಿಸಿತ್ತು.

ನೈಜೀರಿಯಾ ಯುನಿವರ್ಸಿಟಿಯಲ್ಲಿ ಆಫ್ರಿಕನ್ ಭಾಷೆಗಳ ಮತ್ತು ಸಾಹಿತ್ಯಗಳ ವಿಭಾಗದ ಮೇಧಾವಿ ಪ್ರೊಫೆಸರ್ ವಾಂಡೆ ಅಬಿಂಬೊಳ (Prof Wande Abimbola) ವಿದೇಶ ಪ್ರತಿನಿಧಿಗಳ ಪೈಕಿ ಓರ್ವರು. ಅಹ್ಮದಿಯಾ ಮಿಶನರಿ ಎಂದು ಕೇಳಿದಾಗಲೇ, "ಓಹೋ! ನಮಗೆ ಅಹ್ಮದಿಯಾ ಮುಸ್ಲಿಂ ಮಿಶನ್ ಸುಪರಿಚಿತ. ನಮಗೆ ಅವರೊಡನೆ ಸಂಪರ್ಕವಿದೆ'' ಎಂದು ಆಫ್ರಿಕದವರಾದ ಆ ನೀಗ್ರೋ ಪಂಡಿತ ಹೇಳಿದರು.

ಋಷಿಕೇಶದಿಂದ ಬಂದ ಸ್ವಾಮಿ ಚಿದಾನಂದಜಿಯವರನ್ನು ಸಂದರ್ಶಿಸಿದಾಗ, ಒರಿಸ್ಸಾದ ಅಹ್ಮದಿಯಾ ಮಿಶನಿನೊಡನೆ ತಮಗೆ ನಿಕಟ ಸಂಪರ್ಕವಿದೆಯೆಂದು ಅವರು ಹೇಳಿದರು.

ಅಹ್ಮದಿಯಾ ಪ್ರತಿನಿಧಿಗಳಿಗೆ ಈ ಕೆಳಗಿನವರೊಡನೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸುವ ಸಂದರ್ಭ ಲಭಿಸಿತು.

1. ದಲ್ಯಾಲಾಮ ಪ್ರತಿನಿಧಿ ಎಲ್. ಟಿ. ದೋಬೂನ್ (L. T. Do Boon)

2. ಜೋನ್ ಶ್ವೇಲಿಚೆಂಗ್ (John Hsueh-licheng Ph. D. Prof Dept of Philosophy

& Religious Studies, University of Hawai, U. S. A.)

3. ರಿಚಾರ್ಡ್ ಬೆನೆಡಿಕ್ಟ್ (Richard Benedict).

4. ಹರೂಡ್ ಕುರಾಟ (Harud Kurata), ಜಪಾನ್.

5. ಮಿಸ್ ನುಹಾದ್ ಅಬೂ ಅಯಾಷ್ (Miss Nuhad Aboo Ayash), ಲೆಬನಾನ್.

6. ಡಾ। ಹರ್ಷ್ ನಾರಾಯಣ್ (ಬನಾರಸ್ ಹಿಂದೂ ವಿಶ್ವವಿದ್ಯಾಲಯದ ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥ).

7. ಡಾ। ಮಿಸ್ ರೇಖಾ ತೌಂಜಿ (ಪಂಜಾಬ್ ವಿಶ್ವವಿದ್ಯಾಲಯದ ತತ್ವಶಾಸ್ತ್ರ ಪ್ರೊಫೆಸರ್)

8. ಶಾಮನಾಡು ರಾಜಕುಮಾರ ಕಾಶೀನಾಥ ದುರ್ರೈ.

9. ಎಂ. ಎಂ. ಇಸ್ಮಾಯಿಲ್ (ಮದ್ರಾಸ್ ಹೈಕೋರ್ಟ್ ಜಡ್ಜ್).

10. ಬಿ. ಆರ್. ಮಲ್ಲಿಕ್ (ಉಪಾಧ್ಯಕ್ಷ, ಥಿಯೋಸಫಿಕಲ್ ಸೊಸೈಟಿ, ಮದ್ರಾಸ್).

11. ಡಾ। ಪಿ. ಕೆ. ಶರತ್‌ಚಂದ್ರನ್ (ಕೇರಳ ವಿಶ್ವವಿದ್ಯಾಲಯದ ತತ್ವಶಾಸ್ತ್ರ ಪ್ರೊಫೆಸರ್.)

12. ಪ್ರೊ। ಕೆ. ಎಂ. ಜಕರಿಯ (ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥ, ತಿರುವನಂತಪುರ.)

13. ಪ್ರೊ। ಕೆ. ಎ. ವಾರಿಯರ್ (ಕಲ್ಲಿಕೋಟೆ ಯುನಿವರ್ಸಿಟಿ).

14. ಪ್ರೊ। ಕರುಣಾಕರನ್ (ಪಟ್ಟಾಂಬಿ ಸಂಸ್ಕೃತ ಕಾಲೇಜ್).

ಶ್ರೀ ಶಂಕರಾಚಾರ್ಯ ಸ್ವಾಮಿಯವರ ಇಚ್ಛೆಗನುಸಾರವಾಗಿ ಸಮ್ಮೇಳನದಲ್ಲಿ ಭಾಗವಹಿಸಿದ ಎಲ್ಲಾ ಪ್ರತಿನಿಧಿಗಳನ್ನು ಪರಿಚಯಗೊಳ್ಳಲು ಏಪ್ರಿಲ್ 4ರಂದು ಒಂದು ಪ್ರತ್ಯೇಕ ಸಮ್ಮೇಳನವನ್ನು ಏರ್ಪಡಿಸಲಾಯಿತು. ಪ್ರತಿಯೋರ್ವ ಪ್ರತಿನಿಧಿ ಆ ಸಂದರ್ಭದಲ್ಲಿ ಸ್ವಯಂ ಪರಿಚಯ ಪಡಿಸಬೇಕಾಗಿತ್ತು. ಲೆಬನಾನ್‌ನಿಂದ ಆಗಮಿಸಿದ ಪ್ರತಿನಿಧಿ ಮಿಸ್ ನುಹಾದ್ ಅಬೂ ಅಯಾಷ್ ತಾನು ಮುಸ್ಲಿಮರ ಪೈಕಿ Druism ಎಂಬ ವಿಭಾಗದ ಪ್ರತಿನಿಧಿಯೆಂದು ತಿಳಿಸಿದಾಗ, "ತಮಗೆ ಅಹ್ಮದಿಯಾ ಸಂಘಟನೆಯೊಂದಿಗೆ ಸಂಬಂಧವಿದೆಯೇ" ಎಂದು ಶ್ರೀ ಶಂಕರಾಚಾರ್ಯರು ಪ್ರಶ್ನಿಸಿದರು. ಇಲ್ಲವೆಂದು ಉತ್ತರ ಹೇಳಿದಾಗ, ಮೌಲವಿ ಮುಹಮ್ಮದ್ ಉಮರ್ ಸಾಹೆಬ್ ಪ್ರಸ್ತುತ ಕೂಟದಲ್ಲೇ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರದ ಒಂದು ಪ್ರತಿಯನ್ನು ಮತ್ತು ಇತರ ಕೆಲವು ಪುಸ್ತಕಗಳನ್ನು ಮಿಸ್ ನುಹಾದ್‌ರವರಿಗೆ ನೀಡಿದರು. ಮೌಲವಿ ಮುಹಮ್ಮದ್ ಉಮರ್ ಸಾಹೆಬ್ ಮತ್ತು ಜನಾಬ್ ಹಾಫಿಜ್ ಸಾಹೆಬ್ ತಮ್ಮ ಪರಿಚಯ ಹೇಳುವ ಮಧ್ಯೆ ಅಹ್ಮದಿಯಾ ಸಂಘಟನೆಯ ಕುರಿತು ಸಂಕ್ಷಿಪ್ತ ವಿವರಣೆಯನ್ನು ನೀಡಿದರು.

—o—o—o—

"ಯುಗರಶ್ಮಿ"ಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ :: ನಾಲ್ಕು ರೂಪಾಯಿಗಳು

# ಅಹ್ಮದಿಯಾ ವಾರ್ತೆಗಳು

## ಬಂಗ್ಲಾ ದೇಶ

ಬಂಗ್ಲಾ ದೇಶದ ಅಹ್ಮದಿಯಾ ಜಮಾಅತಿನ 54ನೇ ವಾರ್ಷಿಕ ಸಮ್ಮೇಳನ ಡಾಕ್ಕಾ ನಗರದಲ್ಲಿ ಮಾರ್ಚ್ 4ರಿಂದ 7ರ ವರೆಗೆ ವಿಜಯಕರವಾಗಿ ಜರಗಿತು. ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೆಬ್‌ರವರು ಬಂಗ್ಲಾ ದೇಶವನ್ನು ಸಂದರ್ಶಿಸಲು ಸಮ್ಮತಿಸಿರುವರೆಂದು ಬಂಗ್ಲಾ ದೇಶದ ಜಮಾಅತಿನ ಅಮೀರರಾದ ಮೌಲವಿ ಮುಹಮ್ಮದ್ ಸಾಹೆಬರು ಸಮ್ಮೇಳನದಲ್ಲಿ ಪ್ರಕಟಿಸಿದರು. ಬಂಗ್ಲಾ ದೇಶದ ಅಹ್ಮದಿಯಾ ಮಹಿಳೆಯರಿಂದ ಡಾಕ್ಕಾದ ಮಸೀದಿಗಾಗಿ ಎರಡೂವರೆ ಲಕ್ಷ ರೂಪಾಯಿ ಸಂಗ್ರಹಿಸಲಾಗುವುದೆಂದೂ ಅವರು ಹೇಳಿದರು. ಸಮ್ಮೇಳನದಲ್ಲಿ 5000 ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನದ ಸುದ್ದಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರತಿದಿನ ಪ್ರಕಟವಾಗುತ್ತಿತ್ತು. ಬಂಗ್ಲಾ ದೇಶದ ರೇಡಿಯೋ ಸಹ ಈ ಸಮ್ಮೇಳನದ ಸುದ್ದಿಗಳನ್ನು ಬಿತ್ತರಿಸಿತು.

## ಬರ್ಮಾ

ಬರ್ಮಾ ದೇಶದ ರಂಗೂನ್ ನಗರದಲ್ಲಿ ಇದೇ ಕಳೆದ ಫೆಬ್ರುವರಿ ತಿಂಗಳ 26ನೇ ತಾರೀಕಿನಂದು ರಂಗೂನಿನ ರಾಮಕೃಷ್ಣ ಮಠದ ವತಿಯಿಂದ ಒಂದು ಸರ್ವಧರ್ಮ ಸಮ್ಮೇಳನವನ್ನು (Parliament of Religions) ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಇಸ್ಲಾಮಿನ ಪ್ರತಿನಿಧಿಯಾಗಿ ರಂಗೂನಿನ ಅಹ್ಮದಿಯಾ ಜಮಾಅತಿನ ಪ್ರಧಾನ ಪ್ರಚಾರಕರಾದ ಜನಾಬ್ ಖಾಜಾ ಬಷೀರ್ ಅಹ್ಮದ್ ಸಾಹೆಬರು ಭಾಷಣ ಮಾಡಲು ಆಮಂತ್ರಿತರಾಗಿದ್ದರು. ಇವರು ಇಸ್ಲಾಮ್ ಧರ್ಮದ ಮಹತ್ವದ ಕುರಿತು ಪರಿಣಾಮಕಾರಿ ಭಾಷಣ ಮಾಡಿದರು.

## ನೈಜೀರಿಯ

ನೈಜೀರಿಯದ ಅಮೊಶಾ ಎಂಬ ನಗರದಲ್ಲಿ ಒಂದು ಹೊಸ ಸೆಕೆಂಡರಿ ಸ್ಕೂಲಿನ ಕಟ್ಟಡ "ನುಸ್ರತ್ ಜಹಾನ್ ಸ್ಕೀಮ್"ನ ವತಿಯಿಂದ ಐದು ಲಕ್ಷ ರೂಪಾಯಿಗಳ ವೆಚ್ಚದಿಂದ ನಿರ್ಮಿಸಲ್ಪಟ್ಟಿದ್ದು ಈ ಕಳೆದ ಮಾರ್ಚ್ ತಿಂಗಳ ದಿನಾಂಕ 7ರಂದು ಉದ್ಘಾಟಿಸಲಾಯಿತು. ಈ ಸಮಾರಂಭದಲ್ಲಿ ಆ ಸ್ಥಳದ ವಿವಿಧ ಪಂಗಡಗಳ ನಾಯಕರೂ ವಿದ್ಯಾ ಇಲಾಖೆಯ ಉನ್ನತ ಅಧಿಕಾರಿಗಳೂ ಭಾಗವಹಿಸಿದ್ದರು. ಇದು ಈ ವಿಭಾಗದ ಎರಡನೆಯ ವಿದ್ಯಾ ಸಂಸ್ಥೆಯಾಗಿದೆ.

ನೈಜೀರಿಯದ ಅಜೀಬೂಡೇ ನಗರದ ಹತ್ತಿರ ಎರಡು ಸ್ಥಳಗಳಲ್ಲಿ ಹೊಸದಾಗಿ ಎರಡು ಮಸೀದಿ ಮತ್ತು ಮಿಷನ್ ಹೌಸ್‌ಗಳ ನಿರ್ಮಾಣ ಕಾರ್ಯ ಜಾರಿಯಲ್ಲಿದೆ.

ನೈಜೀರಿಯದ ನೆರೆ ರಾಜ್ಯವಾದ ನೈಗರಿನ ನಿಯಾಮಿ ಎಂಬಲ್ಲಿಯೂ ಇತ್ತೀಚೆಗೆ ಒಂದು ಮಿಷನ್ ಹೌಸ್ ಸ್ಥಾಪಿಸಲ್ಪಟ್ಟಿರುತ್ತದೆ.

## ಇಂಗ್ಲೆಂಡ್

B. B. C. ಯು ಇಸ್ಲಾಮಿನ ಕುರಿತು ಲಂಡನ್ ಮಸೀದಿಯ ಇಮಾಮರಾದ ಬಶೀರ್ ಅಹ್ಮದ್ ರಫೀಕ್ ಸಾಹೆಬರೊಂದಿಗೆ ಒಂದು ಸಂದರ್ಶನ ನಡೆಸಿ ಅದನ್ನು ರೇಡಿಯೋ ಮೂಲಕ ಬಿತ್ತರಿಸಿತು. ಆ ಸಂದರ್ಶನದಲ್ಲಿ ಇಮಾಮ್ ಸಾಹೆಬರು ಪೈಗಂಬರರ ಜೀವನದ ಕೆಲವು ಘಟನೆಗಳನ್ನು ವಿವರಿಸಿದ್ದರು. "ದಿ ಮೆಸ್ಸೇಜ್" ("The Message") ಎಂಬ ಇಂಗ್ಲಿಷ್ ಸಿನೇಮಾದ ಕುರಿತು ತನ್ನ ವಿರೋಧವನ್ನು ಅವರು ವ್ಯಕ್ತಗೊಳಿಸಿದರು. ("ದಿ ಮೆಸ್ಸೇಜ್" ಎಂಬ ಚಿತ್ರದಲ್ಲಿ ಪೈಗಂಬರರ ಜೀವನವನ್ನು ಚಿತ್ರಿಸಲಾಗಿದೆ).

ಟೆಲಿವಿಷನ್‌ನಲ್ಲಿ ತೋರಿಸಲಿಕ್ಕಾಗಿ ಇಮಾಮ್ ಸಾಹೆಬರ ಒಂಭತ್ತು ಸಂದರ್ಶನಗಳನ್ನು ಚಿತ್ರಿಸಲಾಯಿತು. ಒಂದೊಂದು ಚಿತ್ರ ಐದು ನಿಮಿಷ ಕಾಲ ತೋರಿಸಲಾಯಿತು. ಇಸ್ಲಾಮಿನ ಕುರಿತು ಎಲ್ಲಾ ಪ್ರಶ್ನೆಗಳನ್ನು ಇಮಾಮ್ ಸಾಹೆಬರು ಈ ಸಂದರ್ಶನಗಳಲ್ಲಿ ಉತ್ತರಿಸಿದರು. ಇದನ್ನು ಲಕ್ಷಾಂತರ ಜನರು ನೋಡಿದರು. SURREY COMET ಎಂಬ ಪತ್ರಿಕೆ ಇಮಾಮ್ ಸಾಹೆಬರ ಒಂದು ಸಂದರ್ಶನವನ್ನು ತನ್ನ ಎರಡು ಸಂಚಿಕೆಗಳಲ್ಲಿ ಪ್ರಕಟಿಸಿತು.

### ಪೈಗಂಬರರ ದಿನಾಚರಣೆ

ಎಪ್ರಿಲ್ 24ರಂದು ಲಂಡನಿನ ಅಹ್ಮದಿಯಾ ಮಸೀದಿಯ ಮಠಾರದಲ್ಲಿ ಮುಹಮ್ಮದ್ ಪೈಗಂಬರರ ದಿನವನ್ನು ಆಚರಿಸಲಾಯಿತು. ಶ್ರೀ ಎಸ್. ಎನ್. ಭಾರದ್ವಜ್, ಪ್ರೊಫೆಸರ್ ಹರಮಂದರ್ ಸಿಂಘ್, ಮಿಸ್ಟರ್ ವಿಲಿಯಂ ಶೆಲ್ಟನ್ ಎಂ. ಪಿ., ರೆವರೆಂಡ್ ಜೇಕ್ ಜಸ್ಟಿನ್, ಇಮಾಂ ಬಿ. ಎ. ರಫೀಕ್, ಸರ್ ಮುಹಮ್ಮದ್ ಝಫ್ರುಲ್ಲಾಖಾನ್ ಮೊದಲಾದವರು ಪೈಗಂಬರರ ಜೀವನದ ವಿವಿಧ ಹಂತಗಳ ಕುರಿತು ಭಾಷಣ ಮಾಡಿದರು.

### ರಾಣಿಗೆ ಪಾರಿತೋಷಕ

ಬ್ರಿಟನ್ ರಾಣಿ ಎಲಿಜಬೆತ್ IIರ ಪಟ್ಟಾಭಿಷೇಕದ ರಜತ ಮಹೋತ್ಸವದ ಗೌರವಾರ್ಥ U. K. ಅಹ್ಮದಿಯಾ ಸಂಘಟನೆಯು ಪರವಾಗಿ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರವನ್ನು ಲಂಡನ್ ಅಹ್ಮದಿಯಾ ಮಸೀದಿಯ ಇಮಾಂ ಬಿ. ಎ. ರಫೀಕ್‌ರವರು ರಾಣಿಗೆ ಕಳುಹಿಸಿರುವರು.

## ಟೋಕಿಯೋದಲ್ಲಿ ಅಹ್ಮದಿಯಾ ಪ್ರದರ್ಶನ

ಇದೇ ಕಳೆದ ಮಾರ್ಚ್ 26ನೇ ತಾರೀಕಿನಂದು ಜಪಾನಿನ ಟೋಕಿಯೋ ನಗರದಲ್ಲಿ 'ಇಸ್ಲಾಮಿಕ ಲೋಕ' ಎಂಬ ಹೆಸರಿನ ಒಂದು ಪ್ರದರ್ಶನವು ಜಪಾನಿನ ಅಹ್ಮದಿಯಾ ಪ್ರಧಾನ ಪ್ರಚಾರಕರಾದ ಮೌಲವಿ ಅತಾವುಲ್ ಮುಜೀಬ್ ರಾಶಿದ್‌ರವರಿಂದ ಸಂಘಟಿಸಲ್ಪಟ್ಟು ಉದ್ಘಾಟಿಸಲಾಯಿತು. ಇಸ್ಲಾಮಿನ ಯಥಾರ್ಥ ಉಪದೇಶಗಳನ್ನು ಅಲ್ಲಿನ ಜನತೆಗೆ ತಿಳಿಯಪಡಿಸುವುದೇ ಈ ಪ್ರದರ್ಶನದ ಉದ್ದೇಶವಾಗಿತ್ತು. ಅಹ್ಮದಿಯಾ ಸಂಘಟನೆ ಪ್ರಸಿದ್ಧಗೊಳಿಸಿದ ಪವಿತ್ರ ಖುರ್‌ಆನಿನ ವಿವಿಧ ಭಾಷೆಗಳ ಭಾಷಾಂತರ ಗ್ರಂಥಗಳೂ ಹದಿನೈದು ಭಾಷೆಗಳಲ್ಲಿ ವಿರಚಿತವಾದ ಇತರ ಇಸ್ಲಾಮಿಕ ಗ್ರಂಥಗಳೂ ಆ ಪ್ರದರ್ಶನದಲ್ಲಿದ್ದುವು. ಈ ಪ್ರದರ್ಶನಕ್ಕೆ ಅನೇಕ ವಿದ್ವಾಂಸರೂ ಪತ್ರಿಕಾ ವರದಿಗಾರರೂ ರಾಯಭಾರಿಗಳೂ ಕಾಲೇಜಿನ ಪ್ರಾಧ್ಯಾಪಕರೂ ವಿದ್ಯಾರ್ಥಿಗಳೂ ಸಾಮಾನ್ಯ ಜನರೂ ಭೇಟಿ ಕೊಟ್ಟರು. ಇಸ್ಲಾಮಿನ ಕುರಿತು ಅನೇಕರ ತಪ್ಪು ಅಭಿಪ್ರಾಯಗಳನ್ನು ನಿವಾರಿಸಲಾಯಿತು. ಅನೇಕರ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರಗಳನ್ನು ಕೊಡಲಾಯಿತು. ಈ ಪ್ರದರ್ಶನದ ಕುರಿತು ವಾರ್ತೆಗಳನ್ನು ಜಪಾನಿನ ರೇಡಿಯೋ ಸಂಸ್ಥೆ ಬಿತ್ತರಿಸಿತು.

—o—o—o—

# ನಿಧನ ವಾರ್ತೆಗಳು

"ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್"

## ಹಝ್‌ರತ್ ಮುಬಾರಕ ಬೇಗಂ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಅಹ್ಮದ್‌ರವರ 7ನೇ ಪುತ್ರಿ ಹಝ್‌ರತ್ ನವಾಬ್ ಸಯ್ಯಿದ ಮುಬಾರಕ ಬೇಗಂ 23—5—1977ರಂದು ತಮ್ಮ 80ನೇ ವಯಸ್ಸಿನಲ್ಲಿ ರಬ್ವಾದಲ್ಲಿ ನಿಧನ ಹೊಂದಿದರು. ಹಝ್‌ರತ್ ಅಹ್ಮದರ ಮಕ್ಕಳ ಪೈಕಿ ಕೊನೆಯವರಾದ ಹಝ್‌ರತ್ ಅಮತುಲ್ ಹಫೀಜ್ ಬೇಗಂ ಮಾತ್ರ ಈಗ ಜೀವಿಸಿದ್ದಾರೆ.

## ಹಝ್‌ರತ್ ಮೌಲಾನ ಅಬುಲ್ ಅತಾ ಸಾಹೆಬ್ ಜಲಂದರಿ

ಅಹ್ಮದಿಯಾ ಪಂಡಿತರಲ್ಲಿ ಅಗ್ರಗಣ್ಯರಾಗಿದ್ದ ಮೌಲಾನ ಅಬುಲ್ ಅತಾ ಸಾಹೆಬರು 30_5_1977 ರಂದು ರಬ್ವಾದಲ್ಲಿ ನಿಧನ ಹೊಂದಿದರು. ಅವರು ತಮ್ಮ ಸಂಪೂರ್ಣ ಜೀವನವನ್ನು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ವಿನಿಯೋಗಿಸಿದರು. ತನು, ಮನ,

ಧನದಿಂದ ಅವರು ಅಪಾರ ಸೇವೆ ಸಲ್ಲಿಸಿದರು. ಅವರು ರಬ್ವಾದಿಂದ ಪ್ರಕಟಗೊಳ್ಳುತ್ತಿರುವ "ಅಲ್‌ಬುಶ್ರಾ" ಎಂಬ ಅರಬಿ ಭಾಷೆಯ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ತಮ್ಮ ಪುತ್ರರಿಗೂ ಪುತ್ರಿಯರಿಗೂ ಅವರು ಉನ್ನತ ಧಾರ್ಮಿಕ ಶಿಕ್ಷಣವನ್ನು ನೀಡಿದ್ದಾರೆ. ಅವರ ಓರ್ವ ಪುತ್ರ ಮೌಲವಿ ಅತಾವುಲ್ ಮುಜೀಬ್ ರಾಷಿದ್ ಜಾಪಾನಿನಲ್ಲಿ ಮತ್ತು ಇನ್ನೋರ್ವ ಪುತ್ರ ಅತಾವುಲ್ ಕರೀಂ ಷಾಹಿದ್ ಲೈಬೀರಿಯಾದಲ್ಲಿ ಅಹ್ಮದಿಯಾ ಪ್ರಚಾರಕರಾಗಿದ್ದಾರೆ.

## ಮೌಲಾನ ಗುಲಾಮ್ ಫರೀದ್ ಮಲಿಕ್ M. A.

ಇವರು 12-1-77ರಂದು ರಬ್ವಾದಲ್ಲಿ ನಿಧನ ಹೊಂದಿದರು. ಇವರು ಯುರೋಪಿನಲ್ಲಿ ಬಹಳ ಕಾಲ ಮತಪ್ರಚಾರಕರಾಗಿ ಕೆಲಸ ಮಾಡಿದ್ದರು. ಜಮಾಅತ್ ಅಹ್ಮದಿಯಾ ಪ್ರಕಟಿಸಿದ ಖುರ್‌ಆನಿನ ಇಂಗ್ಲಿಷ್ ವ್ಯಾಖ್ಯಾನ ಗ್ರಂಥದ ಭಾಷಾಂತರ ಕಾರ್ಯದಲ್ಲಿ ಇವರು ಪ್ರಧಾನ ಪಾತ್ರ ವಹಿಸಿದ್ದರು. ಇವರು ರಿವ್ಯೂ ಓಫ್ ರಿಲೀಜಿಯನ್ಸ್ (Review of Religions) ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದ್ದರು. ಇವರ ದಫನು ಕಾರ್ಯದಲ್ಲಿ ಅಹ್ಮದಿಯಾ ಸಂಘಟನೆಯ ಖಲೀಫರೂ ಭಾಗವಹಿಸಿದ್ದರು.

## ಡಾಕ್ಟರ್ ಸಯ್ಯದ್ ಅಖ್ತರ್ ಅಹ್ಮದ್ ಸಾಹೆಬ್ ಓರೀನವೀ D. Lit.

ಇವರು 31-3-1977ರಂದು ಪಟ್ನಾ ನಗರದಲ್ಲಿ ನಿಧನ ಹೊಂದಿದರು. ಇವರು ಪಟ್ನಾ ಯುನಿವರ್ಸಿಟಿಯ ಉರ್ದು ವಿಭಾಗದ ನಿವೃತ್ತ ಮುಖ್ಯಸ್ಥರಾಗಿದ್ದರು. ಇವರ ಗೌರವಾರ್ಥವಾಗಿ ಪಟ್ನಾ ಯುನಿವರ್ಸಿಟಿ ಮತ್ತು ಕಾಲೇಜಿಗೆ ರಜೆ ಸಾರಲಾಯಿತು. 'ಆಲ್ ಇಂಡಿಯಾ ರೇಡಿಯೋ ಪಾಟ್ನಾ' ಇವರ ನಿಧನ ವಾರ್ತೆಯನ್ನು ಬಿತ್ತರಿಸಿತು. ಇವರು ಸುಮಾರು 20ರಷ್ಟು ಗ್ರಂಥಗಳ ಲೇಖಕರಾಗಿದ್ದು ಅವುಗಳಲ್ಲಿ ಹಲವು ಉನ್ನತ ಪದವಿ ಕ್ಲಾಸುಗಳಿಗೆ ಪಠ್ಯ ಪುಸ್ತಕಗಳಾಗಿ ಉಪಯೋಗಿಸಲ್ಪಡುತ್ತಿವೆ. ಇವರು ಕವಿಯೂ ಭಾಷಣಕಾರರೂ ಆಗಿದ್ದರು. ಮೃತರ ಶರೀರವನ್ನು ಅವರ ಸಹೋದರರಾದ ಸಯ್ಯದ್ ಫಝಲ್ ಅಹ್ಮದ್ ಸಾಹೆಬ್ (ಎಡಿಷನಲ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಬಿಹಾರ್) ಖಾದಿಯಾನಿಗೆ ಟ್ರೈನಿನ ಮೂಲಕ ದಫನಿಗಾಗಿ ತಂದು ಅಲ್ಲಿ ಸಂಸ್ಕಾರದ ಏರ್ಪಾಡು ಮಾಡಿಸಿದರು.

## ಜನಾಬ್ ಸಯ್ಯದ್ ಮದಾರ್ ಸಾಹೆಬ್

ಇವರು 22-3-77ರಂದು ಶಿವಮೊಗ್ಗದಲ್ಲಿ ನಿಧನ ಹೊಂದಿದರು. ಇವರು ಶಿವಮೊಗ್ಗ ಜಮಾಅತಿನ ಮಾಜೀ ಪ್ರಸಿಡೆಂಟರಾಗಿದ್ದ ಅಲ್‌ಹಾಜ್ ಹಝ್ರತ್ ಮೀರ್ ಕಲೀಮುಲ್ಲಾ ಸಾಹೆಬರ ಪ್ರಥಮ ಪುತ್ರರಾಗಿದ್ದರು. ಇವರು ಬಹಳ ಉದಾರಿಗಳೂ ಸುಸ್ವಭಾವಿಗಳೂ ಆಗಿದ್ದರು. ತಮ್ಮ ಪಿತನು ನೂರು ವರ್ಷಕ್ಕಿಂತ ಹೆಚ್ಚು ಕಾಲ ಜೀವಿಸಿ 1970ರಲ್ಲಿ ಮೃತರಾದಾಗ ಇವರು ಶಿವಮೊಗ್ಗ ಜಮಾಅತಿನ ಪ್ರಸಿಡೆಂಟರಾಗಿ ತಮ್ಮ ಮರಣದ ವರೆಗೆ ಅದೇ ಸ್ಥಾನವನ್ನು ಅಲಂಕರಿಸಿದ್ದರು.

---

ಮೃತರಾಗಿ ದೇವರ ಸನ್ನಿಧಿಗೆ ತೆರಳಿದ ಮೇಲಿನ ಎಲ್ಲರ ಆತ್ಮಗಳಿಗೆ ಅಲ್ಲಾಹು ಚಿರಶಾಂತಿಯನ್ನೀಯಲಿ. ಅವರ ಬಂಧು ಮಿತ್ರಾದಿಗಳಿಗೆ ಮೃತರ ಅಗಲುವಿಕೆಯ ಶೋಕವನ್ನು ಸಹಿಸುವ ಸಾಮರ್ಥ್ಯವನ್ನು ಅಲ್ಲಾಹು ನೀಡಲಿ ಎಂದು ನಾವು ಪ್ರಾರ್ಥಿಸುತ್ತೇವೆ.

—ಸಂಪಾದಕ.

# ಸಂಪಾದಕರಿಗೆ ಪತ್ರ

ಶ್ರೀ ಮುಹಮ್ಮದ್ ಯೂಸುಫ್ ಅವರಿಗೆ — ವಂದನೆಗಳು.

ನೀವು ಸಂಪಾದಿಸಿ ಪ್ರಕಾಶಿಸುತ್ತಿರುವ ಯುಗರಶ್ಮಿ ಪತ್ರಿಕೆಯನ್ನು ಆಗಾಗ ನೋಡುತ್ತಿರುತ್ತೇನೆ. ಅದು ಚೆನ್ನಾಗಿಯೇ ಬರುತ್ತಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಮತ್ತು ತಮ್ಮ ಧರ್ಮತತ್ವಗಳನ್ನು ಪ್ರಚಾರಪಡಿಸಲಿಕ್ಕೆ ಭಾಷೆಗಿಂತ ಬೇರೆ ಪ್ರಭಾವೀ ಸಾಧನವಿಲ್ಲ. ಇದು ನಿಮ್ಮ ಪತ್ರಿಕೆಯಿಂದ ಸ್ಪಷ್ಟವಾಗುತ್ತದೆ. ನಿಮ್ಮ ಪತ್ರಿಕೆಯು ಕನ್ನಡ ಭಾಷೆಯಲ್ಲಿ ನನಗೆ ಒಂದು ಕುಂದೂ ಕೂಡ ಕಂಡು ಬರಲಿಲ್ಲ. ಆದಕ್ಕಾಗಿ ನಿಮಗೆ ಶತಶಃ ಧನ್ಯವಾದಗಳು. ನೀವು ಇಷ್ಟು ಸುಂದರವಾಗಿ ಪತ್ರಿಕೆಯನ್ನು ಸಂಪಾದಿಸುತ್ತಿರುವುದು ಅಚ್ಚರಿಯೇ ಸರಿ. ನಿಮ್ಮ ಪತ್ರಿಕೆ ಬೆಳೆದು ಲೋಕ ಪ್ರಿಯವಾಗಿ ಚಿರಕಾಲ ಬಾಳಲೆಂದು ಕೋರುತ್ತೇನೆ.

ಚಿ. ಲ. ದೇಶಪಾಂಡೆ,
ನ್ಯಾಶನಲ್ ಲೈಬ್ರರಿ.

ಕಲಕತ್ತಾ–27.

++++++++++

ಮಾನ್ಯರೇ,

ನಿಮ್ಮ ಪತ್ರಿಕೆ ತನ್ನ ಉದ್ದೇಶದ ಪರಿಮಿತಿಯೊಳಗೆ ಆಸಕ್ತಿ ಹುಟ್ಟಿಸುವಂತಿದೆ. ಜವಾಬ್ದಾರಿಯುತವಾದ ಈ ಕಾರ್ಯದಲ್ಲಿ ನಿಮಗೆ ಇನ್ನೂ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ.

ರಾಮಚಂದ್ರದೇವ, ಎಂ.ಎ.,
ಸೆಲೆಕ್ಷನ್ ಆಫಿಸರ್, ಯುನೈಟೆಡ್ ಸ್ಟೇಟ್ ಲೈಬ್ರರಿ ಆಫ್ ಕಾಂಗ್ರೆಸ್.

ನ್ಯೂ ಡೆಲ್ಲಿ.

++++++++++

ಸಂಪಾದಕ ಮಿತ್ರ,

ತಮ್ಮ ತ್ರೈಮಾಸಿಕ "ಯುಗರಶ್ಮಿ" ಈ ದಿನ ಕೈ ಸೇರಿದೆ. ನೋಡಿ ಸಂತೋಷವಾಯಿತು, ಧನ್ಯವಾದ.

ನಿಜ ಹೇಳಲೇ? ಧರ್ಮ ಮಾನವನ ಉಸಿರು. ಧರ್ಮವಿಲ್ಲದೆ ಮನುಷ್ಯ ಬದುಕಲಾರ. ಎಲ್ಲಿದೆ ಧರ್ಮ? ಎನ್ನುವವರಿಗೂ ಒಂದು ಧರ್ಮ ಇದ್ದೇ ಇದೆ. ಅದರಲ್ಲೂ ಪೈಗಂಬರನ ವಾಣಿ ಉಸುರುವ ತಮ್ಮ ಪ್ರತಿಕೆಯು ಶಬ್ದ ಶಬ್ದಗಳಲ್ಲೂ ಧರ್ಮಮಯವಾಗಿರುವುದನ್ನು ನೋಡಿ ನನಗಂತೂ ತುಂಬ ಹರ್ಷವಾಯಿತು.... ... ... ... ...

ತಮ್ಮ "ಯುಗರಶ್ಮಿ" ಯುಗಯುಗಡ ವರೆಗೂ ಸಹಸ್ರರಶ್ಮಿಯಾಗಿ ಜಗದ ತುಂಬೆಲ್ಲ ಭಾರತೀಯತ್ವದ ಹೊಂಬೆಳಕನ್ನು ಚೆಲ್ಲಲಿ!

ನಿಮ್ಮ ಬಂಧು
ನೆ. ವಿಜಯಕುಮಾರ್,
ಸಂಪಾದಕ, ಕನ್ನಡ ಸಾಹಿತ್ಯ ಮಂಟಪ,

ಬೆಳಗಾವಿ.

++++++++++

ಜನಾಬ್ ಮುಹಮ್ಮದ್ ಯೂಸುಫ್‌ರವರಿಗೆ ಅಸ್ಸಲಾಮು ಅಲೈಕುಂ

ಯುಗರಶ್ಮಿಯ ಅಮೂಲ್ಯ ಪ್ರತಿಗಳು ಕೈ ಸೇರಿದವು. ಇಸ್ಲಾಮಿನ ಬಗ್ಗೆ ತಿಳಿಕನ್ನಡದಲ್ಲಿ ತಿಳಿಸುವ ಈ ಪತ್ರಿಕೆ ತುಂಬಾ ಸಹಕಾರಿಯಾಗಿದೆ. ಕನ್ನಡನಾಡಿನ ಮೂಲೆಮೂಲೆಗಳಲ್ಲೂ ಯುಗರಶ್ಮಿಯು ಹರಡಿ ಬೆಳಗಲಿ.

ಪುತ್ತೂರು.

ಬೊಳುವಾರು ಯೂಸುಫ್ ಹಮೀದ್.

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"...... ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದುಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......." —ಉದಯವಾಣಿ.

"..... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸಯಬಲ್ಲ ಲೇಖನ....." —ನವಭಾರತ.

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

## ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

**READ**

# MINARET

ENGLISH QUARTERLY JOURNAL

Single Copy: Rs. 1/- Annual Subscription: Rs 4/-

Apply to: **The Manager, Minaret Quarterly,**
Ahmadiyya Building, West Silk Street,
**CALICUT—673001.**

( ಹಿಂಬದಿ ಹೊರ ಕವಚದ ಒಳಗಿನ ಪುಟದಿಂದ )

ಪ್ರಚುರವಾಗುತ್ತಿರುವುದನ್ನು ಅತ್ಯಂತ ಸಂತೋಷ ದಿಂದಲೇ ಆ ಮಹಾತ್ಮರು ವೀಕ್ಷಿಸಿದರು. ಅವರ ಶಿಷ್ಯರೂ ಪ್ರತಿ ಪುರುಷರೂ ಲಂಡನ್ ನಗರದಲ್ಲಿ ಇಸ್ಲಾಂ ಧರ್ಮದ ಸತ್ಯತೆಯನ್ನು ಪ್ರತಿಪಾದಿಸಿ ಭಾಷಣ ಮಾಡುವು ದರೊಂದಿಗೆ "ತಾನು ಲಂಡನಿನಲ್ಲಿ ಭಾಷಣ ಮಾಡುವು ದಾಗಿ" ಕಂಡ ದಿವ್ಯದರ್ಶನವು ಮನೋಹರವಾಗಿ ಪೂರ್ತಿಯಾಗಿದೆ. 1924 ಒಕ್ಟೋಬರ್ 19ರಂದು ಲಂಡನ್ ನಗರದಲ್ಲಿ ಸೇರಿದ ಸರ್ವಧರ್ಮ ಸಮ್ಮೇಳನ ದಲ್ಲಿ ಅವರ ಪುತ್ರನೂ ಎರಡನೆಯ ಖಲೀಫರೂ ಆದ ಹಜ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಅವರು ಭಾಗವಹಿಸಿ ಭಾಷಣ ಮಾಡಿದಾಗ ಲಂಡನ್ ನಗರವು ಆತ್ಮಿಕ ಉಜ್ವಲ ಪ್ರಕಾಶ ವನ್ನು ದರ್ಶಿಸಿತು. ಅದೇ ದಿವಸ ಲಂಡನ್ ನಗರದ ಪ್ರಥಮ ಮೊದಲನೆಯ ಮುಸ್ಲಿಂ ಮಸೀದಿಗೆ ತಳಕಲ್ಲು ಹಾಕಲಾಯಿತು. ಅಹ್ಮದಿಯಾ ಸಂಘಟನೆಯು ಎರಡ ನೆಯ ಖಲೀಫರಾಗಿ ಅರ್ಧ ಶತಮಾನಗಳ ಕಾಲ ಸೇವೆ ಸಲ್ಲಿಸಿದ ಆ ಮಹಾ ಪುರುಷನ ಕಾಲದಲ್ಲಿಯೇ ಯುರೋ ಪಿನ ವಿವಿಧ ಭಾಗಗಳಲ್ಲಿ ಐದು ದೈವ ಭವನಗಳು ತಲೆ ಯೆತ್ತಿದವು. ಯುರೋಪಿನ ಹೃದಯ ಭಾಗಗಳಾದ ಲಂಡನ್, ದಿ ಹೇಗ್, ಹಂಬರ್ಗ್, ಫ್ರಾಂಕ್‌ಫರ್ಟ್, ಜೂರಿಕ್ ಎಂಬೀ ನಗರಗಳಲ್ಲಿ ಇಸ್ಲಾಮಿನ ಸತ್ಯ ಸಂದೇಶ ಗಳನ್ನು ದಿನಂಪ್ರತಿ ಐದು ಸಮಯಗಳಲ್ಲಿ ಸಾರುವ ಮಸೀದಿಗಳು ನಿರ್ಮಾಣವಾಯಿತು. ಅಹ್ಮದಿಯಾ ಸಂಘಟನೆಯ ಈಗಿನ ಖಲೀಫರಾದ ಹಜ್ರತ್ ನಾಸಿರ್ ಅಹ್ಮದ್ ಅವರು 1967ರಲ್ಲಿ ಡೆನ್‌ಮಾರ್ಕಿನ ರಾಜಧಾನಿ ಕೋಪನ್‌ಹೇಗನ್‌ನಲ್ಲೂ 1976ರಲ್ಲಿ ಸ್ವಿಡನಿನ ಗೋಟನ್ ಬರ್ಗ್‌ನಲ್ಲೂ ಅಹ್ಮದಿಯಾ ಮಸೀದಿಗಳನ್ನು ಉದ್ಘಾಟಿಸಿದರು. ಯುರೋಪಿನ ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರವನ್ನೂ ಅಹ್ಮದಿಯಾ ಸಂಘವು ಪ್ರಕಟಿಸಿದೆ.

ಇಸ್ಲಾಮಿನ ಸತ್ಯ ಸೂರ್ಯನು ಪೂರ್ಣ ಪ್ರಭಾವ ದೊಂದಿಗೆ ಐರೋಪ್ಯ ರಾಜ್ಯಗಳಲ್ಲಿ ತನ್ನ ರಶ್ಮಿಗಳನ್ನು ಚೆಲ್ಲುವಾಗ ಪಾಶ್ಚಾತ್ಯರು ಗುಂಪು ಗುಂಪಾಗಿ ಇಸ್ಲಾಂ ಧರ್ಮದಲ್ಲಿ ಪ್ರವೇಶಿಸುವರೆಂಬ ವಾಗ್ದತ್ತ ಮಸೀಹಾ ರವರ ಭವಿಷ್ಯವಾಣಿಯು ಇಂದು ಪೂರ್ತಿಯಾಗುತ್ತಲಿದೆ.

ಪ್ರತಿಕೂಲ ಕಾಲಾವಸ್ಥೆಯನ್ನು ಲೆಕ್ಕಿಸದೆ ರಾತ್ರಿ ಹಗಲು ಇಸ್ಲಾಂ ಧರ್ಮ ಪ್ರಚರಣ ಮಾಡುತ್ತಿರುವ ಅಹ್ಮದಿಯಾ ಮಿಶನರಿಗಳು ಯುರೋಪು ಮತ್ತು ಅಮೇರಿಕಾದ ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಇಸ್ಲಾಮಿಗಾಗಿ ಜೀವಾ ರ್ಪಣಗೈಯುವ ಅನೇಕಾನೇಕ ಮನುಷ್ಯರನ್ನು ಅರಿಸುತ್ತ ಲಿದ್ದಾರೆ. ನಿನ್ನೆಯ ವರೆಗೂ ಪೋಪರ ಶಬ್ದವು ಮಾಂತ್ರಿಕ ವಿಕಾರವನ್ನು ನಿರ್ಮಿಸುತ್ತಿದ್ದ ಪಾಶ್ಚಾತ್ಯರಲ್ಲಿ ಇಂದು ಇಸ್ಲಾಮಿನ ಸಮತ್ವ ಸುಂದರವಾದ ಸಂದೇಶವು ಭಕ್ತಿ ನಿರ್ಭರವಾದ ಅನುಭೂತಿಗಳನ್ನು ಸೃಷ್ಟಿಸುತ್ತಲಿದೆ.

ಸಮತ್ವ ಮತ್ತು ಸಾಹೋದರ್ಯಕ್ಕಾಗಿ ಲೋಕವು ಇಂದು ಹಾತೊರೆಯುತ್ತಿದೆ. ಕಪ್ಪು ಜನರ ಮುಂದೆ ಬಿಳಿಯರ ಆಧಿಪತ್ಯವನ್ನು ಸ್ಥಾಪಿಸಲು ನೀತಿಯನ್ನೂ ನ್ಯಾಯವನ್ನೂ ಕೊಲೆಗೈಯಲು ಮುಂದಾದ ಮನುಷ್ಯ ದ್ರೋಹಿಗಳಿಂದ ಇಂದಿನ ಪಾಶ್ಚಾತ್ಯ ರಾಜ್ಯಗಳು ತುಂಬಿವೆ. ಮಾನವನನ್ನು ಮಾನವನಾಗಿ ಅಂಗೀಕರಿಸಲು ತಯಾರಿಲ್ಲದ ಈ ಕಾಲದಲ್ಲಿ ಮನುಷ್ಯತ್ವಕ್ಕೆ ಬೆಲೆ ಕಲ್ಪಿಸುವ ಒಂದು ಧರ್ಮವನ್ನು ಮಾತ್ರವೇ ಲೋಕವು ಅಂಗೀಕರಿಸೀತು. ಈ ಸತ್ಯತೆಯನ್ನು ಸರಿಯಾಗಿ ತಿಳಿದು ಕೊಂಡು, ಈ ಯುಗದ ಸಮಸ್ಯೆಗಳಿಗೆ ಪರಿಹಾರಗಳನ್ನು ನಿರ್ದೇಶಿಸುವ ಇಸ್ಲಾಂ ಧರ್ಮದಲ್ಲಿ ಮಾತ್ರವೇ ಕ್ಷೇಮ ವಿರುವುದೆಂದು ಪಾಶ್ಚಾತ್ಯ ಜನರು ತಿಳಿದುಕೊಳ್ಳುತ್ತಿ ದ್ದಾರೆ. ಮಾನವೀಯ ಭ್ರಾತೃತ್ವದ ಶಾಂತಿ ಮತ್ತು ಸೌಹಾರ್ದ ಸಂದೇಶದೊಂದಿಗೆ ಈ ಕಾಲದ ಇಮಾಂ ಹಜ್ರತ್ ನಾಸಿರ್ ಅಹ್ಮದ್‌ರವರು ಕಳೆದ ವರ್ಷ ಯುರೋಪು ಮತ್ತು ಅಮೇರಿಕಾದ ನಗರ ಬೀದಿಗಳಲ್ಲಿ ಸಂಚರಿಸಿದಾಗ ಪಾಶ್ಚಾತ್ಯ ಜನರು ನೀಡಿದ ಹೃದಯಂಗ ಮವಾದ ಸ್ವಾಗತವು ಬರಲಿರುವ ಇಸ್ಲಾಮಿನ ವಿಜಯಕ್ಕೆ ನಾಂದಿಯನ್ನು ಹಾಕಿತು. ಪಾಶ್ಚಾತ್ಯ ರಾಜ್ಯಗಳಲ್ಲೆಲ್ಲಾ ಆಧ್ಯಾತ್ಮಿಕ ರಂಗದಲ್ಲಿ ಕಂಡುಬರುವ ಈ ಹೊಸ ತಿರುವು ಪಶ್ಚಿಮದಲ್ಲಿ ಸೂರ್ಯನುದಯಿಸುವನು ಎಂದು ಭವಿಷ್ಯ ನುಡಿದ ಹಜ್ರತ್ ಮುಹಮ್ಮದ್ ಪೈಗಂಬರರ ಸತ್ಯತೆ ಗೆಂಬಂತೆ ಅದನ್ನು ವ್ಯಾಖ್ಯಾನಿಸಿದ ಹಜ್ರತ್ ಅಹ್ಮದರ ಸತ್ಯತೆಗೂ ಬಹುದೊಡ್ಡ ನಿದರ್ಶನವಾಗಿದೆ.

M. P. I.

# ಪಶ್ಚಿಮ ದಿಕ್ಕಿನಿಂದ ಸೂರ್ಯೋದಯ - 1

ವಾಗ್ದತ್ತ ಲೋಕೋದ್ಧಾರಕನ (ಇಮಾಂ ಮಹದಿಯು) ಅವತರಣಾ ವೇಳೆಯಲ್ಲಿ ಸೂರ್ಯನು ಪಶ್ಚಿಮ ದಿಕ್ಕಿನಿಂದ ಉದಯಿಸುವನು ಎಂದು ಇಸ್ಲಾಂ ಧರ್ಮ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರು ಭವಿಷ್ಯ ನುಡಿದಿರುವರು. ಸಂಭವಿಸಲಿರುವ ಕಾರ್ಯಗಳ ಕುರಿತು ದಿವ್ಯಾತ್ಮರೂ ಪ್ರವಾದಿಗಳೂ ನುಡಿಯುವ ಭವಿಷ್ಯವಾಣಿಗಳು ಅಂತರಾರ್ಥಗಳನ್ನು ಒಳಗೊಂಡಿರುತ್ತವೆ. ಪ್ರವಾದನಗಳು ಬಾಹ್ಯಾರ್ಥದಲ್ಲೇ ಪೂರ್ತಿಯಾಗಬೇಕೆಂದು ಮೊಂಡು ಹಿಡಿಯುವವರಿಗೆ ಅವುಗಳಿಂದ ಪ್ರಯೋಜನ ಪಡೆಯಲು ಭಾಗ್ಯ ಲಭಿಸುವುದಿಲ್ಲವೆಂದು ಹಿಂದಿನ ಮತಚರಿತ್ರೆಯು ನಮಗೆ ತಿಳಿಸಿ ಕೊಡುತ್ತದೆ. ಪಾರಮಾರ್ಥಿಕ ಸತ್ಯತೆಗಳನ್ನು ತ್ಯಜಿಸಿ ಆಧ್ಯಾತ್ಮಿಕ ಅಂಧಕಾರದಲ್ಲಿ ನರಳುತ್ತಿರುವ ಇಂದಿನ ಜನಾಂಗವನ್ನು ಆಧ್ಯಾತ್ಮಿಕವಾಗಿ ಉದ್ಧರಿಸಲು ನಿಯೋಗಿತರಾದ ಹಝ್ರತ್ ಅಹ್ಮದ್ (ಅ) ಅವರನ್ನೂ ಭೌತಿಕತೆಯಲ್ಲಿ ಉಜ್ವಲ ಪುರೋಗಮನವನ್ನು ಗಳಿಸಿದ ಆಧುನಿಕ ಬಾಹ್ಯಾರ್ಥವಾದಿಗಳು ನಿರಾಕರಿಸಿದರು. ಆದರೆ, ಕಾಲಕಳೆದಂತೆ ಆ ಸತ್ಯಾತ್ಮರ ವಾದಗಳನ್ನು ಲೋಕವು ಅಂಗೀಕರಿಸುತ್ತಾ ಬರುತ್ತಿದೆ.

ಸೂರ್ಯನು ಪಶ್ಚಿಮ ದಿಗಂತದಿಂದ ಉದಯಿಸುವನು ಎಂಬ ಭವಿಷ್ಯವಾಣಿಯನ್ನು ಆ ಪುಣ್ಯಾತ್ಮರು ಅಂತರಾರ್ಥದಲ್ಲಿ ವ್ಯಾಖ್ಯಾನಿಸಿದರು. ಶತಮಾನಗಳಿಂದಲೂ ಆತ್ಮಿಕ ಅಂಧಕಾಲದಲ್ಲಿ ಮುಳುಗಿ ನರಳುತ್ತಿರುವ ಪಾಶ್ಚಾತ್ಯ ಜನರಲ್ಲಿ ಸತ್ಯ ವಿಶ್ವಾಸವೆಂಬ ಸೂರ್ಯವು ಉದಯಿಸಿ ಬರುವುದೆಂದೂ ಅದರ ಕಿರಣಗಳಿಂದ ಪುನೀತರಾಗಿ ಅವರು ದೇವರ ಸಾಮಿಪ್ಯವನ್ನು ಗಳಿಸುವರೆಂದೂ ಈ ಭವಿಷ್ಯವಾಣಿಯ ಅರ್ಥವಾಗಿದೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಈರೀತಿ ಹೇಳುತ್ತಾರೆ:—

"ಪಶ್ಚಿಮ ದಿಕ್ಕಿನಿಂದ ಸೂರ್ಯನುದಯಿಸುವನು ಎಂಬುದರ ಅರ್ಥವು, ಬಹು ಕಾಲದಿಂದಲೂ ಅವಿಶ್ವಾಸವನ್ನೂ ಅಧರ್ಮವನ್ನೂ ಸ್ವಾರ್ಥ ಮಾಡಿಕೊಂಡಿರುವ ಪಾಶ್ಚಾತ್ಯ ಜನರು ಸತ್ಯ ಸೂರ್ಯನಿಂದ ಪ್ರಕಾಶಿತರಾಗುವರೆಂದೂ ಅವರು ಇಸ್ಲಾಮಿನ ಅನುಗ್ರಹಗಳನ್ನು ಆಸ್ವಾದಿಸುವರೆಂದೂ ಆಗಿರುವುದಾಗಿ ಒಂದು ದಿವ್ಯ ದರ್ಶನ ಮುಖಾಂತರ ನನಗೆ ತಿಳಿಸಲ್ಪಟ್ಟಿದೆ. ಆ ದಿವ್ಯ ದರ್ಶನದಲ್ಲಿ ಲಂಡನ್ ನಗರದ ಪ್ರವಚನ ವೇದಿಕೆಯೊಂದರಲ್ಲಿ ನಾನು ಇಸ್ಲಾಂ ಧರ್ಮದ ಸತ್ಯತೆಯ ಕುರಿತು ಪ್ರಬಲವಾದ ಅನೇಕ ಸಾಕ್ಷ್ಯಗಳನ್ನೀಯುತ್ತಾ ಭಾಷಣ ಮಾಡಿದುದಾಗಿಯೂ, ನಂತರ 'ತಿತ್ತಿರಿ' ಹಕ್ಕಿಗಳ ಗಾತ್ರದ ಬಿಳಿ ಬಣ್ಣವಿರುವ ಅನೇಕ ಪಕ್ಷಿಗಳನ್ನು ಹಿಡಿದುದಾಗಿಯೂ ಕಂಡಿರುವೆನು. ಇದರಿಂದ ನಾನು ತಿಳಿದುಕೊಳ್ಳುವ ಅರ್ಥವು, ನನಗೆ ಸ್ವತಃ ಆ ರಾಜ್ಯಗಳಿಗೆ ಹೋಗಲು ಸಾಧ್ಯವಾಗದಿದ್ದರೂ ನನ್ನ ಕೃತಿಗಳು ಆ ರಾಜ್ಯದವರೆಡೆಯಲ್ಲಿ ಹಬ್ಬಿ, ನೀತಿ ಬೋಧವೂ ಚಿಂತಾಶಕ್ತಿಯೂ ಇರುವ ಅನೇಕಾನೇಕ ಆಂಗ್ಲೇಯರು ಸತ್ಯಕ್ಕೆ ತಲೆಬಾಗುವರೆಂದಾಗಿದೆ. ಲೋಕನಾಥನಾದ ಪರಮಾತ್ಮನು ತನ್ನ ಕರುಣಾವೃತವನ್ನು ಪಾಶ್ಚಾತ್ಯರ ಮೇಲೆ ಸುರಿಸಲು ಇಚ್ಛಿಸಿರುವನು. ನಾನು ಹೇಳಿದುದು ಸ್ವಕಪೋಲ ಕಲ್ಪಿತ ಮಾತುಗಳಲ್ಲ. ನನ್ನ ಮಾತನ್ನೂ ಕಾರ್ಯವನ್ನೂ ಎಲ್ಲಾ ತಿಳಿದುಕೊಳ್ಳುವ ಪರಮಾತ್ಮನಿಂದ ತಿಳಿಸಲ್ಪಟ್ಟದ್ದನ್ನು ಹೇಳಿರುವೆನು. ಆದುದರಿಂದ ಪರಮಾತ್ಮನಲ್ಲಿ ಭಯಭಕ್ತಿಯುಳ್ಳವರಾಗಿರಿ. ಆಲೋಚಿಸಿ ತಿಳಿದುಕೊಳ್ಳುವವರಾಗಿರಿ.'' (ಇಸಾಲೆಯೆ ಔಹಾಂ, ಪುಟ 515-516).

ಆ ಮಹಾತ್ಮರು ಈರೀತಿ ಹೇಳಿ ಇಂದಿಗೆ 85 ವರ್ಷಗಳು ಕಳೆದುವು. ಸೂರ್ಯನು ಪಶ್ಚಿಮದಿಂದ ಉದಯಿಸುವನೆಂಬ ಪೈಗಂಬರರ ಭವಿಷ್ಯವಾಣಿಯು ಹಝ್ರತ್ ಅಹ್ಮದ್ ಅವರು ವ್ಯಾಖ್ಯಾನಿಸಿದ ರೂಪದಲ್ಲಿಯೇ ಇಂದು ಪೂರ್ತಿಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅವರು ಬರೆದಿರುವಂತೆ ಅವರಿಗೆ ಅಲ್ಲಿ ಹೋಗಲು ಸಾಧ್ಯವಾಗದಿದ್ದರೂ ಅವರ ಕೃತಿಗಳು ತನ್ನ ಜೀವಿತ ಕಾಲದಲ್ಲಿಯೇ ಪಾಶ್ಚಾತ್ಯ ರಾಜ್ಯಗಳಲ್ಲಿ

(26ನೇ ಪುಟ ನೋಡಿರಿ)

Regd. with the Registrar of Newspapers for India, Regd. No. R. N. 27354/75
YUGARASHMI Kannada Quarterly,
April - June 1977 / Shahadath - Ihsan 1356


# BOOKS ON ISLAM AND CONTEMPORARY RELIGIONS

| | | |
|---|---|---|
| 1. | **Holy Quran with Arabic Text and English Translation** | 12-00 |
| 2. | **Ahmadiyyat or The True Islam**<br>By Hazrat Mirza Bashiruddin Mahmud Ahmad | 8-00 |
| 3. | **New World Order**<br>By Hazrat Mirza Bashiruddin Mahmud Ahmad | 2-25 |
| 4. | **The Teachings of Islam**<br>By Hazrat Mirza Ghulam Ahmad | 6-00 |
| 5. | **Characteristics of the Quranic Teachings**<br>By Hazrat Mirza Bashiruddin Mahmud Ahmad. | 1-00 |
| 6. | **Where did Jesus Die?**<br>By J. D. Shams | 2-25 |
| 7. | **The Tomb of Jesus**<br>By Sufi M. R. Bengali | 0-75 |
| 8. | **Jesus in India**<br>By Hazrat Mirza Ghulam Ahmad | 2-25 |
| 9. | **The Christian Doctrine of Atonement**<br>By Dr. Mufti Muhammad Sadiq. | 1-50 |
| 10. | **An Interpretation of Islam**<br>By Prof. Dr. Laura Veccia Vaglieri | 1-50 |

Write to

**NAZIR DAWAT-O-TABLIGH**
**P. O. QADIAN - 143516. (Punjab)**


Printed by: A.B. Sunder Ram Shetty, at Aruna Printing Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore, at 23/1008 Ansari Road, Bunder, Mangalore-575001.